# ಅಧ್ಯಾಯ – II

## ಪೂರ್ವಭಾವಿ ಯೋಜನೆ ಮತ್ತು ಹಣಕಾಸು ನಿರ್ವಹಣೆ

## ಪೂರ್ವಭಾವಿ ಯೋಜನೆ

### *ಕ್ಷೇತ್ರ ಸಮೀಕ್ಷೆ*

**2.1.** ಯೋಜನೆಯ ಮಾರ್ಗಸೂಚಿಗಳ ಅನುಸಾರ, ವಿದ್ಯುತ್ ಸರಬರಾಜು ಕಂಪನಿಗಳು ಫೀಡರುಗಳನ್ನು ಪ್ರತ್ಯೇಕಗೊಳಿಸುವಿಕೆ ಹಾಗೂ ಗ್ರಾಹಕರುಗಳ ಹೊಂದಾಣಿಕೆ/ಸಮ್ಮಿಶ್ರಣ, ಬಳಕೆಯ ಮಾದರಿ, ಓಲ್ಟೇಜು ನಿಯಂತ್ರಣ, ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟದ ಮಟ್ಟ, ಟ್ರಾನ್ಸ್‌ಫಾರ್ಮರುಗಳು ಮತ್ತು ಫೀಡರುಗಳು/ವಿದ್ಯುತ್ ಮಾರ್ಗಗಳು, ಇತ್ಯಾದಿಗಳ ಅತ್ಯುತ್ತಮ ವಿದ್ಯುತ್ ಹೊರೆ ಹಾಗೂ ವಿತರಣಾ ವ್ಯವಸ್ಥೆಯ ದಕ್ಷತೆಯಿಂದ ಕೂಡಿದ ನಿರ್ವಹಣೆಗಾಗಿ ಇತರೆ ಯೋಜನೆಗಳ ಅಡಿಯಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳು, ಇವೇ ಮುಂತಾದ ಎಲ್ಲಾ ಸೂಕ್ತ/ಸಂಬಂಧಿತ ಪರಿಮಿತಿಗಳನ್ನು ಪರಿಗಣಿಸಿದಂತೆ ಉಪ-ಪ್ರಸರಣ ಮತ್ತು ವಿತರಣಾ ಸಂಕೀರ್ಣವ್ಯವಸ್ಥೆಯಲ್ಲಿನ ವಿಮರ್ಶಾತ್ಮಕ ಅಂತರಗಳನ್ನು ಗುರುತಿಸುವ ಅಗತ್ಯತೆಯಿದ್ದಿತು. ಅಂತಹ ನಿರ್ಧಾರಣೆಯ ಆಧಾರದ ಮೇರೆಗೆ, ಯೋಜನೆಯ ಉದ್ದೇಶಗಳು ಈಡೇರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕಾಮಗಾರಿಗಳ ವ್ಯಾಪ್ತಿಗೆ ಆಧ್ಯತೆಯನ್ನು ನೀಡಬೇಕಿದ್ದಿತು. ಮುಂದುವರೆದು, ಗ್ರಾಮೀಣ ವಿದ್ಯುತೀಕರಣ ಮೂಲಸೌಕರ್ಯ ಹಾಗೂ ಬಡತನದ ರೇಖೆಗಿಂತ ಕೆಳಗಿರುವವರಿಗಾಗಿನ ವಿದ್ಯುತ್ ಸಂಪರ್ಕದ ಉದ್ದೇಶಕ್ಕಾಗಿ, ಯೋಜನಾ ಪ್ರದೇಶದಲ್ಲಿನ ಪ್ರಸ್ತಾಪಿತ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸುವ ಸಲುವಾಗಿ ಅಗತ್ಯವಿರುವಂತಹ ಮೂಲಸೌಕರ್ಯವನ್ನು ನಿರ್ಧಾರಣೆ ಮಾಡುವ ಸಲುವಾಗಿ ವಿದ್ಯುತ್ ಸರಬರಾಜು ಕಂಪನಿಗಳು ಪ್ರತಿಯೊಂದು ಗ್ರಾಮದಲ್ಲಿಯೂ ಹಾಗೂ ಜನವಸತಿ ಸ್ಥಳಗಳಲ್ಲಿ ವಾಸ್ತವಿಕವಾಗಿ ಕ್ಷೇತ್ರ ಸಮೀಕ್ಷೆ ನಡೆಸಿದನಂತರ ವಿದ್ಯುತ್ ಸರಬರಾಜು ಕಂಪನಿಗಳು ಸವಿವರ ಯೋಜನಾ ವರದಿಗಳನ್ನು ತಯಾರಿಸುವ ಅಗತ್ಯತೆ ಇರುತ್ತದೆ ಎಂಬುದಾಗಿ ಮಾರ್ಗಸೂಚಿಗಳು ನಿರ್ದಿಷ್ಟಪಡಿಸಿರುತ್ತವೆ[6]. ವಿದ್ಯುತ್ ಸರಬರಾಜು ಕಂಪನಿಗಳು ಎಲ್ಲಾ ಜನವಸತಿ ಪ್ರದೇಶಗಳ ಸ್ಥಳಗಳನ್ನು ಗುರುತಿಸುವ ಮೂಲಕ, ಪ್ರಸಕ್ತ ಇರುವಂತಹ ಹಾಗೂ ಪ್ರಸ್ತಾಪಿಸಲಾಗಿರುವಂತಹ ಮೂಲಸೌಕರ್ಯ (ಹೈ ಟೆನ್ಷನ್ (ಎಚ್‌ಟಿ)/ಲೋ ಟೆನ್ಷನ್ (ಎಲ್‌ಟಿ) ಮಾರ್ಗಗಳು, ವಿತರಣಾ ಟ್ರಾನ್ಸ್‌ಫಾರ್ಮರುಗಳು), ಇತ್ಯಾದಿಗಳನ್ನು ಸೂಚಿಸಿದಂತೆ ಗ್ರಾಮಗಳ ವಾಸ್ತವಿಕ ವಿದ್ಯುತ್ ವಿತರಣಾ ಮಾರ್ಗದ[7] (ಸಿಂಗಲ್-ಲೈನ್) ರೇಖಾಚಿತ್ರಗಳನ್ನು ಸಹ ವಿದ್ಯುತ್ ಸರಬರಾಜು ಕಂಪನಿಗಳು ತಯಾರಿಸುವ ಅಗತ್ಯತೆಯಿದ್ದಿತು.

ವಿದ್ಯುತ್ ಸರಬರಾಜು ಕಂಪನಿಗಳು ದೀನದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯ (ಡಿಡಿಯುಜಿಜೆವೈ) ಅಡಿಯಲ್ಲಿ 11ಕಿವ್ಯಾ/ಎಲ್‌ಟಿ ವಿದ್ಯುತ್ ಸರಬರಾಜು ಮಾರ್ಗಗಳ 16,711.39 ಸರ್ಕ್ಯೂಟ್ ಕಿಲೋಮೀಟರುಗಳನ್ನು (ಸಿಕೆಎಂಗಳು) ಹಾಗೂ 12,301 ಸಂಖ್ಯೆಗಳಷ್ಟು ಡಿಟಿಸಿಗಳನ್ನು ಕಾರ್ಯಗತಗೊಳಿಸಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಡಿಡಿಯುಜಿಜೆವೈ ಅಡಿಯಲ್ಲಿನ ಪರೀಕ್ಷಾ-ಪರಿಶೀಲನೆ ಮಾಡಲಾದಂತಹ ಎಂಟು ಯೋಜನೆಗಳಲ್ಲಿ[8] ಈ ಮೂಲಸೌಕರ್ಯಗಳನ್ನು ಪ್ರಸ್ತಾಪಿಸುವ ವೇಳೆಯಲ್ಲಿ ಎಸ್ಕಾಂಗಳು ಗ್ರಾಹಕರುಗಳ ಹೊಂದಾಣಿಕೆ/ಸಮ್ಮಿಶ್ರಣ, ಬಳಕೆಯ ಮಾದರಿ, ಓಲ್ಟೇಜು ನಿಯಂತ್ರಣ, ಟ್ರಾನ್ಸ್‌ಫಾರ್ಮರುಗಳು ಮತ್ತು ಫೀಡರುಗಳು/ವಿದ್ಯುತ್ ಮಾರ್ಗಗಳು, ಇತ್ಯಾದಿಗಳ ವಿದ್ಯುತ್ ಹೊರೆ, ಇವೇ ಮುಂತಾದ ಸಂಬಂಧಿತ ಪರಿಮಿತಿಗಳನ್ನು ಪರಿಗಣಿಸಿದ್ದವು ಎಂಬುದಕ್ಕಾಗಿ ಯಾವುದೇ ದಾಖಲೆಗಳ ಸಾಕ್ಷ್ಯಾಧಾರಗಳನ್ನು ಇಟ್ಟಿರಲಿಲ್ಲ.

---


[6] ಆರ್‌ಜಿಜಿವಿವೈ XIIನೇ ಯೋಜನೆ ಅಡಿಯಲ್ಲಿ ನೀಡಲಾಗಿರುವಂತಹ ಸವಿವರ ಯೋಜನಾ ವರದಿಗಳ ತಯಾರಿಕೆಗಾಗಿನ ಮಾರ್ಗಸೂಚಿಗಳು. ಡಿಡಿಯುಜಿಜೆವೈ ಮಾರ್ಗಸೂಚಿಗಳನ್ನು ನೀಡಿರಲಿಲ್ಲ.

[7] ವಾಸ್ತವಿಕ ವಿದ್ಯುತ್ ವಿತರಣಾ ಮಾರ್ಗದ (ಸಿಂಗಲ್ ಲೈನ್) ರೇಖಾಚಿತ್ರವು, ಒಳಹರಿವು ವಿದ್ಯುತ್ ಮೂಲದಿಂದ ಪ್ರತಿಯೊಂದು ಹೊರಹರಿವು ವಿದ್ಯುತ್ ಹೊರೆಗೆ ವಾಸ್ತವಿಕ ವಿದ್ಯುತ್ ವಿತರಣಾ ಮಾರ್ಗವನ್ನು ಪ್ರತಿಯೊಂದು ವಿದ್ಯುತ್ ಉಪಕರಣದ ದರ್ಜೆಗಳು ಹಾಗೂ ಗಾತ್ರಗಳು, ಅವುಗಳ ಸರ್ಕ್ಯೂಟ್ ಕಂಡಕ್ಟರುಗಳು, ಹಾಗೂ ಸಂರಕ್ಷಣಾ ಸಾಧನಗಳನ್ನು ಒಳಗೊಂಡಂತೆ ತೋರಿಸುತ್ತದೆ.

[8] ಆರ್‌ಜಿಜಿವಿವೈ ಅಡಿಯಲ್ಲಿ ಉಳಿದ ಎರಡು ಪರೀಕ್ಷಾ ಪರಿಶೀಲನೆ ಮಾಡಲಾದ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಗಮನಿಸಲಾದ ಅಂಶಗಳನ್ನು ***ಕಂಡಿಕೆ 2.3ರಲ್ಲಿ*** ವಿವರಿಸಲಾಗಿದೆ.


ಮುಂದುವರೆದು, ಸವಿವರ ಯೋಜನಾ ವರದಿಗಳು ಎಲ್ಲಾ ಜನವಸತಿ ಪ್ರದೇಶಗಳು ಹಾಗೂ ಪ್ರಸ್ತಾಪಿಸಲಾಗಿರುವಂತಹ ಮೂಲಸೌಕರ್ಯಗಳನ್ನು ಸೂಚಿಸಿದಂತೆ ಪ್ರತಿಯೊಂದು ಗ್ರಾಮದ ವಾಸ್ತವಿಕ ವಿದ್ಯುತ್ ವಿತರಣಾ ಮಾರ್ಗದ (ಸಿಂಗಲ್-ಲೈನ್) ರೇಖಾಚಿತ್ರಗಳನ್ನು ಒಳಗೊಂಡಿರಲಿಲ್ಲ. ಸವಿವರ ಯೋಜನಾ ವರದಿಗಳಲ್ಲಿ ಸೇರಿಸಲಾಗಿದ್ದಂತಹ ಪರಿಮಾಣಗಳು ಕಾರ್ಯಗತಗೊಳ್ಳುವ ವೇಳೆಯಲ್ಲಿ ಗಮನಾರ್ಹವಾದಂತಹ ರೀತಿಯಲ್ಲಿ ವ್ಯತ್ಯಾಸಗಳಿಂದ ಕೂಡಿದ್ದವಾದ್ದರಿಂದ ಸವಿವರ ಯೋಜನಾ ವರದಿಗಳು ನಿಖರತೆಯಿಂದ ಕೂಡಿರಲಿಲ್ಲ. ಐದು ವಿದ್ಯುತ್ ಸರಬರಾಜು ಕಂಪನಿಗಳ ಪೈಕಿ ಪ್ರತಿಯೊಂದರಲ್ಲಿಯೂ ಅನುಮೋದಿತ ಪರಿಮಿತಿಗಳಿಗೆ ಸಂಬಂಧಿಸಿದಂತೆ 11 ಕಿವ್ಯಾ ಮತ್ತು ಎಲ್‌ಟಿ ವಿದ್ಯುತ್ ಮಾರ್ಗಗಳಿಗೆ ಸಂಬಂಧಿಸಿದಂತೆ ವ್ಯತ್ಯಯಗಳ ವಿಸ್ತಾರವನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಲಾಗಿದೆ:

**ರೇಖಾಚಿತ್ರ ಸಂಖ್ಯೆ 2.1 (ಎ): ದೀನದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ ಅಡಿಯಲ್ಲಿ ಮಂಜೂರಾತಿಗಿಂತ ಮಿಗಿಲಾಗಿ ಕಾರ್ಯಗತಗೊಳಿಸಲಾದಂತಹ ವಾಸ್ತವಿಕ ಪರಿಮಾಣಗಳ (11ಕಿವ್ಯಾ ವಿದ್ಯುತ್ ಮಾರ್ಗಗಳು – ಸಿಕೆಎಂಗಳು) ಶೇಕಡಾವಾರು.**




(ಮೂಲ: ಇಂಧನ ಇಲಾಖೆ, ಕರ್ನಾಟಕ ಸರ್ಕಾರ, ಇವರಿಂದ ಪಡೆಯಲಾದ ಮಾಹಿತಿಯಂತೆ)

**ರೇಖಾಚಿತ್ರ ಸಂಖ್ಯೆ 2.1 (ಬಿ): ದೀನದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ ಅಡಿಯಲ್ಲಿ ಮಂಜೂರಾತಿಗಿಂತ ಮಿಗಿಲಾಗಿ ಕಾರ್ಯಗತಗೊಳಿಸಲಾದಂತಹ ವಾಸ್ತವಿಕ ಪರಿಮಾಣಗಳ (ಎಲ್‌ಟಿ ಮಾರ್ಗಗಳು – ಸಿಕೆಎಂಗಳು) ಶೇಕಡಾವಾರು.**




(ಮೂಲ: ಇಂಧನ ಇಲಾಖೆ, ಕರ್ನಾಟಕ ಸರ್ಕಾರ, ಇವರಿಂದ ಪಡೆಯಲಾದ ಮಾಹಿತಿಯಂತೆ)

ಮಂಜೂರಾತಿಗಿಂತ ಮಿಗಿಲಾಗಿ ವಾಸ್ತವಿಕವಾಗಿ ಕಾರ್ಯಗತಗೊಳಿಸಲಾಗಿದ್ದಂತಹ ಪರಿಮಾಣಗಳು 11 ಕಿವ್ಯಾ ಮಾರ್ಗಗಳಲ್ಲಿ ಶೇಕಡಾ (–) 0.90 ರಿಂದ ಶೇಕಡಾ 1,642.39ರಷ್ಟು ಹಾಗೂ ಎಲ್‌ಟಿ

ಮಾರ್ಗಗಳಲ್ಲಿ ಶೇಕಡಾ (–) 23.04ರಿಂದ ಶೇಕಡಾ 59.93ರಷ್ಟು ಆಗಿದ್ದವು. ಸುಸ್ಪಷ್ಟವಾಗಿ, ವಾಸ್ತವಿಕ ಅಗತ್ಯತೆಯ ಆಧಾರದ ಮೇರೆಗೆ, ಸವಿವರ ಯೋಜನಾ ವರದಿಗಳಲ್ಲಿ ಸೇರಿಸಲಾಗಿದ್ದಂತಹ ಪರಿಮಾಣಗಳು ಯಥಾರ್ಥತೆಯಿಂದ ಕೂಡಿರಲಿಲ್ಲ. ಇದು ಕ್ಷೇತ್ರ ಸಮೀಕ್ಷೆಯೂ ಕೂಡ ಸಮರ್ಪಕವಾಗಿರಲಿಲ್ಲ ಹಾಗೂ ಸಂಬಂಧಿತ ಪರಿಮಿತಿಗಳನ್ನು (ಗ್ರಾಹಕರುಗಳ ಹೊಂದಾಣಿಕೆ/ಸಮ್ಮಿಶ್ರಣ, ಬಳಕೆಯ ಮಾದರಿ, ಟ್ರಾನ್ಸ್‌ಫಾರ್ಮರುಗಳ ವಿದ್ಯುತ್ ಹೊರೆ, ಇತರೆ ಯೋಜನೆಗಳ ಅಡಿಯಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳು, ಇತ್ಯಾದಿ) ಮೂಲಸೌಕರ್ಯಗಳ ಪ್ರಸ್ತಾವನೆಯ ವೇಳೆಯಲ್ಲಿ ಪರಿಗಣಿಸಿರಲಿಲ್ಲ ಎಂಬುದನ್ನೂ ಸಹ ತೋರಿಸುತ್ತಿದ್ದಿತು. ಇದು ಪರೀಕ್ಷಾ–ಪರಿಶೀಲನೆ ಮಾಡಲಾದ ಎಂಟು ಜಿಲ್ಲೆಗಳಲ್ಲಿ, ವಿದ್ಯುತ್ ಸರಬರಾಜು ಕಂಪನಿಗಳು ಸವಿವರ ಯೋಜನಾ ವರದಿಗಳಲ್ಲಿ ಕೆಲವು ಪರಿಮಾಣಗಳನ್ನು ಸೇರಿಸುವಲ್ಲಿ ವಿಫಲಗೊಂಡಿದ್ದವು ಅಥವಾ ಅಗತ್ಯವಿರದ ಕೆಲವು ಪರಿಮಾಣಗಳನ್ನು ಸೇರಿಸಿದ್ದವು ಎಂಬ ವಾಸ್ತವಾಂಶದಿಂದಲೂ ಕೂಡ ಬೆಂಬಲಿತವಾಗಿದೆ. ಇದು ಕಾರ್ಯಗತಗೊಳಿಸುವ ವೇಳೆಯಲ್ಲಿ ಕಾಮಗಾರಿಗಳ ವ್ಯಾಪ್ತಿಯನ್ನು ಬದಲಾವಣೆಗೊಳಿಸುವ ಅಗತ್ಯತೆಯನ್ನುಂಟು ಮಾಡಿತು ಹಾಗೂ ಕಾಮಗಾರಿಗಳ ಪೂರ್ಣಗೊಳ್ಳುವಿಕೆಯಲ್ಲಿ ತಪ್ಪಿಸಬಹುದಾದ ವಿಳಂಬ ಉಂಟಾಗುವಲ್ಲಿ ಪರಿಣಮಿಸಿದ್ದಿತು. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ದೃಷ್ಟಾಂತಗಳನ್ನು ಈ ಕೆಳಗೆ ನೀಡಲಾಗಿದೆ:

- ಇತರೆ ಯೋಜನೆಗಳ ಅಡಿಯಲ್ಲಿ ಅದಾಗಲೇ ಕಾರ್ಯಗತಗೊಳಿಸಲಾಗಿದ್ದಂತಹ (2016–17) 143 ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳನ್ನು (ಡಿಟಿಸಿಗಳು) ತುಮಕೂರಿನ ಸವಿವರ ಯೋಜನಾ ವರದಿಯಲ್ಲಿ ಸೇರಿಸಲಾಗಿದ್ದಿತು.

- ಮಂಡ್ಯದಲ್ಲಿ ಬಡತನ ರೇಖೆಗಿಂತ ಕೆಳಗಿದ್ದಂತಹ 23,000 ಕುಟುಂಬಗಳಿಗೆ ಸಂಬಂಧಿಸಿದಂತೆ ಮೀಟರುಗಳನ್ನು ಮನೆಯ ಒಳಗಿನಿಂದ ಮನೆಯ ಹೊರಗಡೆಗೆ ಸ್ಥಳಾಂತರಿಸುವ ಕಾಮಗಾರಿಯನ್ನು ಸೇರಿಸಿರದಿದ್ದುದು ವಾಸ್ತವಿಕ ಪರಿಮಾಣಗಳು ಶೇಕಡಾ 182ರಷ್ಟು ಹೆಚ್ಚಳಗೊಳ್ಳುವಲ್ಲಿ ಪರಿಣಮಿಸಿದ್ದಿತು.

- ಮಂಡ್ಯದಲ್ಲಿ 11 ಕಿವ್ಯಾ ವಿದ್ಯುತ್ ಮಾರ್ಗವನ್ನು (ಫೀಡರು ಬೇರ್ಪಡಿಸುವಿಕೆ/ಪ್ರತ್ಯೇಕಗೊಳಿಸುವಿಕೆಯನ್ನು ಹೊರತುಪಡಿಸಿದಂತೆ) ಸೇರಿಸಿರದಿದ್ದುದು (73.96 ಕಿಮೀ) ವಾಸ್ತವಿಕ ಪರಿಮಾಣಗಳು ಶೇಕಡಾ 1,587ರಷ್ಟು ಹೆಚ್ಚಳಗೊಳ್ಳುವಲ್ಲಿ ಪರಿಣಮಿಸಿದ್ದಿತು.

- ಹಾವೇರಿಯ ಸವಿವರ ಯೋಜನಾ ವರದಿಯಲ್ಲಿ ಬಳಕೆದಾರರುಗಳ ಮೀಟರುಗಳ ಸಂಖ್ಯೆಯಲ್ಲಿ ಮೂಲ ಪ್ರಕ್ಷೇಪಣೆ 'ಯಾವುದೂ ಇರುವುದಿಲ್ಲ', ಇದು 2,626ರಷ್ಟು ಹೆಚ್ಚಳ ಕಂಡಿದ್ದಿತು, ಇದರಿಂದಾಗಿ ಮೂಲ ಪರಿಮಾಣದಲ್ಲಿ ಗಮನಾರ್ಹವಾಗಿ ಹೆಚ್ಚಳವಾಗಿದ್ದಿತು. ಮತ್ತೊಂದು ಕಡೆ, ಬೀದರ್ ಜಿಲ್ಲೆಯಲ್ಲಿ ಎಲ್‌ಟಿ ಮಾರ್ಗಗಳಿಗೆ ಸಂಬಂಧಿಸಿದಂತೆ, ವಾಸ್ತವಿಕ ಪರಿಮಾಣಗಳು 28.35 ಕಿಮೀಗಳಿಂದ 6.245 ಕಿಮೀಗಳಿಗೆ ತೀಕ್ಷ್ಣವಾದ ರೀತಿಯಲ್ಲಿ ಶೇಕಡಾ 78ರಷ್ಟು ಇಳಿಮುಖಗೊಂಡಿದ್ದಿತು.

- ತುಮಕೂರು ಜಿಲ್ಲೆಯಲ್ಲಿ ಎರಡು 11 ಕಿವ್ಯಾ ವಿದ್ಯುತ್ ಹೊರಸಾಗಣೆ ಮಾರ್ಗಗಳಿಗಾಗಿ (ಅಮೃತೂರು ಮುಸ್ಸ್‌ನಿಂದ ಹನುಮಪುರ ಗೇಟು ಹಾಗೂ ಎಡಿಯೂರು ಮುಸ್ಸ್‌ನಿಂದ ಸಿಲ್ಕ್ ಫಾರ್ಮ್ ಹೇಮಾವತಿ) ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿ ಸ್ಥಳಗಳನ್ನು ಇತರೆ ಸ್ಥಳಗಳಿಗೆ (ಯಡವನಿ ಮುಸ್ಸ್‌ನಿಂದ ವಳಗೆರೆಪುರ ಹಾಗೂ ಯಡಿಯೂರು ಮುಸ್ಸ್‌ನಿಂದ ಅಮ್ಮನಹಟ್ಟಿ ಸೀಮೆಗೆ) ಬದಲಾವಣೆಗೊಳಿಸಲಾಗಿದ್ದಿತು. ಇದು, ಪರಿಷ್ಕೃತ ಅನುಮೋದನೆಗಳನ್ನು ಪಡೆದುಕೊಳ್ಳುವಲ್ಲಿ (ಜೂನ್ 2018/ನವಂಬರ್ 2018/ಜುಲೈ 2019) ಹಾಗೂ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ 12 ತಿಂಗಳುಗಳ ವಿಳಂಬಗಳು ಸಂಭವಿಸಲು ಕಾರಣವಾಯಿತು. ಕಾಮಗಾರಿಗಳು ನಿರ್ದಿಷ್ಟಪಡಿಸಿದ ಕಾಲಾವಧಿಯಾದ ಜನವರಿ 2019ಕ್ಕೆ ಬದಲಾಗಿ ಡಿಸೆಂಬರ್ 2020ರಲ್ಲಿ ಪೂರ್ಣಗೊಂಡಿತ್ತು.

ಯೋಜನಾ ನಿರ್ವಹಣಾ ಸಂಸ್ಥೆಯ (ಪಿಎಂಎ) ಸಹಯೋಗದೊಂದಿಗೆ ಸಂಬಂಧಿತ ಕ್ಷೇತ್ರ ಅಧಿಕಾರಿಗಳು ಸವಿವರ ಸಮೀಕ್ಷೆಗಳನ್ನು ನಡೆಸಿದನಂತರ ಸವಿವರ ಯೋಜನಾ ವರದಿಗಳನ್ನು ತಯಾರಿಸಲಾಗಿದ್ದಿತು

ಎಂಬುದಾಗಿ ಸರ್ಕಾರವು ಉತ್ತರಿಸಿತು (ನವಂಬರ್ 2021). ವಾಸ್ತವಿಕ ವಿದ್ಯುತ್ ವಿತರಣಾ ಮಾರ್ಗದ (ಸಿಂಗಲ್ ಲೈನ್) ರೇಖಾಚಿತ್ರಗಳು, ಹಣಕಾಸಿಗೆ ಸಂಬಂಧಿತ ವಿಶ್ಲೇಷಣೆ, ಇತ್ಯಾದಿಗಳು ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತದಿಂದ (ಆರ್‌ಇಸಿ) ಒದಗಿಸಲಾಗಿದ್ದಂತಹ ಸವಿವರ ಯೋಜನಾ ವರದಿಗಳ ಜಾಲ ಪೋರ್ಟಲ್‌ಗೆ ಊಡಿಕೆ ಮಾಡಬೇಕಾದ ದತ್ತಾಂಶ/ಮಾಹಿತಿಯ ಒಂದು ಭಾಗವಾಗಿರಲಿಲ್ಲ ಮತ್ತು ಆದ್ದರಿಂದ, ಊಡಿಕೆ ಮಾಡಲು ಅಗತ್ಯವಿದ್ದಂತಹ ದತ್ತಾಂಶ/ಮಾಹಿತಿಯನ್ನು ಮಾತ್ರ ಆನ್‌ಲೈನ್‌ನಲ್ಲಿ ಊಡಿಕೆ ಮಾಡಲಾಗುತ್ತಿದ್ದಿತು ಹಾಗೂ ಸವಿವರ ಯೋಜನಾ ವರದಿಗಳನ್ನು ತಂತ್ರಾಂಶ ಅನ್ವಯಗಳಿಂದ ಪಡೆದುಕೊಳ್ಳಲಾಗುತ್ತಿದ್ದಿತು. ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳು (ಡಿಟಿಸಿಗಳು), ಎಚ್‌ಟಿ, ಎಲ್‌ಟಿ ವಿದ್ಯುತ್ ಮಾರ್ಗ, ಇತ್ಯಾದಿ ಅಗತ್ಯ ಮೂಲಸೌಕರ್ಯಗಳನ್ನು ಸಂಬಂಧಿತ ಕ್ಷೇತ್ರದಲ್ಲಿ ಸ್ಥಿತಿಗತಿಗಳನ್ನು ಅವಲಂಭಿಸಿದಂತೆ ಹಾಗೂ ಪ್ರಸಕ್ತ ವ್ಯವಸ್ಥೆಯಲ್ಲಿ ಲಭ್ಯವಿರುವ ಅನುಕೂಲತೆಗಳ ಅನುಸಾರ ಸವಿವರ ಯೋಜನಾ ವರದಿಯಲ್ಲಿ ಪ್ರಸ್ತಾಪಿಸಲಾಗುತ್ತಿದ್ದಿತು.

ಉತ್ತರವು ಒಪ್ಪುವಂತಿಲ್ಲ. ಯೋಜನೆಯ ಮಾರ್ಗಸೂಚಿಗಳು ಚಿಂತಿಸಿರುವ ರೀತಿಯಲ್ಲಿ ಸಂಬಂಧಿತ ಪರಿಮಿತಿಗಳನ್ನು ಪರಿಗಣಿಸದೆಯೇ ಮೂಲಸೌಕರ್ಯಗಳ ಪ್ರಸ್ತಾವನೆಗಳು ಹಾಗೂ ಸವಿವರ ಯೋಜನಾ ವರದಿಗಳ ತಯಾರಿಕೆಯು ಸಮರ್ಥನೀಯವಾಗಿರಲಿಲ್ಲ. ಅಂತಹ ಪರಿಮಿತಿಗಳ ಅನುಪಸ್ಥಿತಿಯಲ್ಲಿ ಉದ್ದೇಶಗಳು ಈಡೇರಿರುವಿಕೆಯಲ್ಲಿನ ವಿಸ್ತಾರವನ್ನು ನಿರ್ಧಾರಣೆ ಮಾಡುವಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಅನ್ಯ ಮಾರ್ಗಗಳಿರಲಿಲ್ಲ. ಮುಂದುವರೆದು, ಕಾರ್ಯಗತಗೊಳಿಸುವಿಕೆಯ ಸಮಯದಲ್ಲಿನ ಪರಿಮಾಣಗಳಲ್ಲಿನ ವ್ಯತ್ಯಯಗಳು ಸವಿವರ ಯೋಜನಾ ವರದಿಗಳನ್ನು ತಯಾರಿಸುವಿಕೆಗೆ ಮುಂಚಿನ ಅಸಮರ್ಪಕ ಸಮೀಕ್ಷೆಯನ್ನು ಪ್ರತಿಬಿಂಬಿಸುತ್ತಿದ್ದವು, ಇದು ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ಅನಗತ್ಯ ವಿಳಂಬದಲ್ಲಿ ಪರಿಣಮಿಸಿದ್ದಿತು.

***ಸವಿವರ ಯೋಜನಾ ವರದಿಗಳಲ್ಲಿ ವೆಚ್ಚ/ಮೌಲ್ಯಗಳ ಮರು–ಹಂಚಿಕೆ.***

**2.2**. ಡಿಡಿಯುಜಿಜೆವೈ ಅಡಿಯಲ್ಲಿ ಇಂಧನ ಮಂತ್ರಾಲಯವು ನೀಡಿರುವಂತಹ ಮಾರ್ಗಸೂಚಿಗಳ ಅನುಸಾರ, ಇಂಧನ ಮಂತ್ರಾಲಯವು ಸವಿವರ ಯೋಜನಾ ವರದಿಗಳಿಗೆ ಅನುಮೋದನೆಯನ್ನು ತಿಳಿಸಿದ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಯೋಜನೆಗಳಿಗೆ ಗುತ್ತಿಗೆಗಳನ್ನು ವಹಿಸಿಕೊಡಬೇಕಿದ್ದಿತು.

ಇಂಧನ ಮಂತ್ರಾಲಯವು ಜಿಲ್ಲಾವಾರು ಸವಿವರ ಯೋಜನಾ ವರದಿಗಳಿಗೆ (30 ಸಂಖ್ಯೆಗಳು) ಆಗಸ್ಟ್ 2015ರಲ್ಲಿ ಅನುಮೋದನೆ ನೀಡಿದ್ದಿತಾದರೂ, ಪರೀಕ್ಷಾ–ಪರಿಶೀಲನೆ ಮಾಡಲಾದಂತಹ ಎಂಟು ಯೋಜನೆಗಳಲ್ಲಿ ಗುತ್ತಿಗೆಗಳನ್ನು ಜನವರಿ 2017 ಹಾಗೂ ಸೆಪ್ಟಂಬರ್ 2017ರ ನಡುವೆಯಷ್ಟೇ ಅಂದರೆ ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತಹ ಆರು ತಿಂಗಳುಗಳಿಗೆ ಪ್ರತಿಯಾಗಿ ಅನುಮೋದನೆಯು ದೊರೆತ ದಿನಾಂಕದಿಂದ 17 ತಿಂಗಳುಗಳಿಂದ 26 ತಿಂಗಳುಗಳು ಕಳೆದನಂತರ ನೀಡಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಗುತ್ತಿಗೆಗಳನ್ನು ನೀಡುವಲ್ಲಿನ ವಿಳಂಬವು ಈ ಕೆಳಗಿನ ಕೋಷ್ಟಕದಲ್ಲಿ ತಿಳಿಸಿರುವಂತೆ ವಿವಿಧ/ಅನೇಕ ಸಂದರ್ಭಗಳಲ್ಲಿ ಸವಿವರ ಯೋಜನಾ ವರದಿಗಳಲ್ಲಿ ವೆಚ್ಚಗಳನ್ನು ಮರು–ಹಂಚಿಕೆ ಮಾಡಿದ್ದರ ಪ್ರಮುಖ ಕಾರಣದಿಂದ ಆಗಿದ್ದಿತು:

**ಕೋಷ್ಟಕ ಸಂಖ್ಯೆ 2.1: ಅನುಮೋದಿತ ಸವಿವರ ಯೋಜನಾ ವರದಿಗಳಲ್ಲಿ ವೆಚ್ಚಗಳನ್ನು ಪರಿಷ್ಕರಿಸಿದ್ದಂತಹ ದೃಷ್ಟಾಂತಗಳು**

| ಕ್ರಮ ಸಂಖ್ಯೆ | ವೆಚ್ಚಗಳನ್ನು ಪರಿಷ್ಕರಿಸಿದ್ದಂತಹ ದೃಷ್ಟಾಂತಗಳು |
|---|---|
| 1 | ಬೆಸ್ಕಾಂನಿಂದ ಗ್ರಾಮೀಣ ವಿದ್ಯುತೀಕರಣ ಮತ್ತು ವ್ಯವಸ್ಥೆಯನ್ನು ಬಲಗೊಳಿಸುವಿಕೆಗೆ ಸಂಬಂಧಿಸಿದಂತೆ ₹ 41.86 ಕೋಟಿ ಯಿಂದ ₹ 182.73 ಕೋಟಿಗೆ ಹೆಚ್ಚಳಗೊಳಿಸುವ ಮೂಲಕ, ಮೀಟರುಗಳನ್ನು ಅಳವಡಿಸುವಿಕೆಗೆ ಸಂಬಂಧಿಸಿದಂತೆ ವೆಚ್ಚಗಳನ್ನು ₹ 66.28 ಕೋಟಿಯಿಂದ ₹ 14.12 ಕೋಟಿಗೆ ಇಳಿಕೆ ಮಾಡುವ ಮೂಲಕ ಹಾಗೂ ಫೀಡರುಗಳ ಪ್ರತ್ಯೇಕಗೊಳಿಸುವಿಕೆಗಾಗಿ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳನ್ನು (ಡಿಟಿಸಿಗಳು) ಕೈಬಿಡುವ ಮೂಲಕ (ನವಂಬರ್ 2015), ವೆಚ್ಚದಲ್ಲಿ ಪರಿಷ್ಕರಣೆಗೊಳಿಸಲಾಯಿತು. |
| 2 | ಹುವಿಸಕಂಯ ಕೋರಿಕೆಯ (ಅಕ್ಟೋಬರ್ 2015) ಆಧಾರದ ಮೇರೆಗೆ ಕರ್ನಾಟಕ ಸರ್ಕಾರವು ₹ 247.84 ಕೋಟಿಯಿಂದ ₹ 334.85 ಕೋಟಿಗೆ ಹಾಗೂ ₹ 331.85 ಕೋಟಿಗೆ, ಈ ರೀತಿಯಾಗಿ ಎರಡು ಸಲ ಸವಿವರ ಯೋಜನಾ ವರದಿ ವೆಚ್ಚ/ಮೌಲ್ಯವನ್ನು ಪರಿಷ್ಕರಿಸಿತು (ನವಂಬರ್ 2015/ಡಿಸೆಂಬರ್ 2015). |
| 3 | ವಿಸಕಂಗಳು ಸಂಸದ್ ಆದರ್ಶ ಗ್ರಾಮ ಯೋಜನೆ (ಎಸ್‌ಎಜಿವೈ) ಅಡಿಯಲ್ಲಿನ ಗ್ರಾಮಗಳನ್ನು ಸೇರಿಸಿಕೊಳ್ಳದಿರುವ ಬಗ್ಗೆ ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತವು (ಆರ್‌ಇಸಿ) ಮಾಡಿದ (ಜನವರಿ |

| ಕ್ರಮ ಸಂಖ್ಯೆ | ವೆಚ್ಚಗಳನ್ನು ಪರಿಷ್ಕರಿಸಿದ್ದಂತಹ ದೃಷ್ಟಾಂತಗಳು |
|---|---|
| | 2016) ಆಕ್ಷೇಪಣೆಯನ್ನು ಪರಿಗಣಿಸಿದಂತೆ, ಕರ್ನಾಟಕ ಸರ್ಕಾರವು ಸಂಸತ್ತು ಆದರ್ಶ ಗ್ರಾಮ ಯೋಜನೆ (ಎಸ್‌ಎಜಿವೈ) ಅಡಿಯಲ್ಲಿನ ಗ್ರಾಮಗಳನ್ನು ಸೇರಿಸಿಕೊಳ್ಳುವ ಮೂಲಕ ವಿಸಕಂಗಳ ಒಳಗೇ ಎರಡು ಸಲ ಮೊತ್ತವನ್ನು ಪುನರ್–ಹಂಚಿಕೆ ಮಾಡಿತು (ಜನವರಿ 2016/ಸೆಪ್ಟಂಬರ್ 2016). |
| 4 | ಹುವಿಸಕಂ ಮತ್ತು ಮಂವಿಸಕಂಯಲ್ಲಿ ವಿದ್ಯುತೀಕರಣ ವ್ಯವಸ್ಥೆಯನ್ನು ಹೊಂದಿರದ ಗ್ರಾಮಗಳ ಸಂಖ್ಯೆಯಲ್ಲಿ, ಫೀಡರುಗಳನ್ನು ಪ್ರತ್ಯೇಕಿಸುವ ಕಾಮಗಾರಿಗಳಲ್ಲಿನ ಇಳಿಕೆ, ಹಾಗೂ ವಿಕೇಂದ್ರೀಕೃತ ವಿತರಿಸಲ್ಪಟ್ಟಿರುವ ವಿದ್ಯುತ್ ಉತ್ಪಾದನೆಯ (ಡಿಡಿಜಿ) ಮರು–ಹಂಚಿಕೆಗಳ ಕಾರಣದಿಂದಾಗಿ ಘಟಕಗಳ ಒಳಗೇ ವೆಚ್ಚಗಳನ್ನು ಪುನರ್–ಹಂಚಿಕೆ ಮಾಡಲಾಗಿದ್ದಿತು (ಸೆಪ್ಟಂಬರ್ 2016). |

**ಮೂಲ: ವಿದ್ಯುತ್ ಸರಬರಾಜು ಕಂಪನಿಗಳು ಕರ್ನಾಟಕ ಸರ್ಕಾರದದೊಂದಿಗೆ/ ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತದೊಂದಿಗೆ (ಆರ್‌ಇಸಿ) ಮಾಡಿದ್ದಂತಹ ಪತ್ರವ್ಯವಹಾರಗಳು).**

ಮೇಲಿನವುಗಳ ಪರಿಣಾಮವಾಗಿ, ವಿದ್ಯುತ್ ಸರಬರಾಜು ಕಂಪನಿಗಳು ಪೂರಕ–ಸವಿವರ ಯೋಜನಾ ವರದಿಗಳನ್ನು ಗ್ರಾಮೀಣ ವಿದ್ಯುತೀಕರಣ ನಿಗಮಕ್ಕೆ (ಆರ್‌ಇಸಿ) ಕೇವಲ ಅಕ್ಟೋಬರ್/ನವಂಬರ್ 2016ರಲ್ಲಿಯಷ್ಟೇ ಸಲ್ಲಿಸಲು ಸಾಧ್ಯವಾಗಿದ್ದಿತು ಹಾಗೂ ಜಿಲ್ಲಾವಾರು/ಘಟಕವಾರು ಸವಿವರ ಯೋಜನಾ ವರದಿಗಳಿಗೆ ಸಂಬಂಧಿಸಿದಂತೆ ₹ 1,747.48 ಕೋಟಿ[9] ಮೊತ್ತದಷ್ಟು ಒಟ್ಟಾರೆ ವೆಚ್ಚಕ್ಕೆ ಗ್ರಾಮೀಣ ವಿದ್ಯುತೀಕರಣ ನಿಗಮವು (ಆರ್‌ಇಸಿ) ಜನವರಿ 2017/ಜುಲೈ 2017ರಲ್ಲಿ ಅನುಮೋದನೆಗಳನ್ನು ನೀಡಿದ್ದಿತು. ಸವಿವರ ಯೋಜನಾ ವರದಿಗಳನ್ನು ಅಂತಿಮ ರೂಪಕ್ಕೆ ತರುವಲ್ಲಿನ ಈ ವಿಳಂಬಗಳು ಕಾಮಗಾರಿಗಳನ್ನು ಪ್ರಾರಂಭಗೊಳಿಸಲು ವಿಳಂಬಗೊಳ್ಳುವಲ್ಲಿ ಹಾಗೂ ಫಲಾನುಭವಿಗಳಿಗೆ ಚಿಂತಿಸಲಾಗಿದ್ದಂತಹ ಪ್ರಯೋಜನಗಳನ್ನು ಮುಂದೂಡುವಲ್ಲಿ ಪರಿಣಮಿಸಿತು.

ಘಟಕವಾರು ವೆಚ್ಚಗಳ ಪುನರ್–ಹಂಚಿಕೆಯಲ್ಲಿನ ಮಾರ್ಪಾಡುಗಳು, ಸಂಸದ್ ಆದರ್ಶ ಗ್ರಾಮ ಯೋಜನೆ (ಎಸ್‌ಎಜಿವೈ) ಅಡಿಯಲ್ಲಿನ ಗ್ರಾಮಗಳನ್ನು ಸೇರಿಸಿಕೊಂಡಿದ್ದು, ಪ್ರಮುಖ/ಪ್ರಧಾನ ಸಾಮಗ್ರಿಗಳಿಗೆ ಕೇಂದ್ರೀಯ ಖರೀದಿ ದರಗಳನ್ನು ಅಳವಡಿಸಿಕೊಂಡಿದ್ದು, ಇವೇ ಮುಂತಾದವುಗಳ ಕಾರಣದಿಂದಾಗಿ ಮೇಲ್ವಿಚಾರಣಾ ಸಮಿತಿಯಿಂದ ಆಗಸ್ಟ್ 2015ರಲ್ಲಿ ಪ್ರಾರಂಭಿಕ ಅನುಮೋದನೆಯನ್ನು ಪಡೆದ ನಂತರ ಯೋಜನೆಗಳ ಕಾಮಗಾರಿಗಳನ್ನು ಪ್ರಾರಂಭಿಸುವಲ್ಲಿ ವಿಳಂಬಗಳಾಗಿದ್ದವು ಎಂಬುದಾಗಿ ಸರ್ಕಾರವು ತನ್ನ ಉತ್ತರದಲ್ಲಿ ತಿಳಿಸಿತು (ನವಂಬರ್ 2021).

ಸವಿವರ ಯೋಜನಾ ವರದಿಯನ್ನು ತಯಾರಿಸುವಲ್ಲಿನ ಲೋಪದೋಷಗಳನ್ನು ಉತ್ತರವು ಖಚಿತಪಡಿಸುತ್ತದೆ, ಇದು ವೆಚ್ಚಗಳನ್ನು ಅನೇಕ ಬಾರಿ ಪರಿಷ್ಕರಿಸುವಲ್ಲಿಗೆ ಹಾಗೂ ಯೋಜನೆಯ ಅಡಿಯಲ್ಲಿ ಫಲಾನುಭವಿಗಳಿಗೆ ಚಿಂತಿಸಲಾಗಿದ್ದಂತಹ ಪ್ರಯೋಜನಗಳನ್ನು ಮುಂದೂಡುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಿತು.

***ಆರ್‌ಜಿಜಿವಿವೈ ಅಡಿಯಲ್ಲಿ ಸವಿವರ ಯೋಜನಾ ವರದಿಗಳ ತಯಾರಿಕೆ***

**2.3**. ಆರ್‌ಜಿಜಿವಿವೈ ಅಡಿಯಲ್ಲಿ ನಿಗದಿಪಡಿಸಲಾಗಿದ್ದಂತಹ ಮೈಲಿಕಲ್ಲುಗಳ ಅನುಸಾರ, ಸವಿವರ ಯೋಜನಾ ವರದಿಗಳನ್ನು ತಯಾರಿಸುವ ಪ್ರಕ್ರಿಯೆ, ಅದರ ಅನುಮೋದನೆ ಹಾಗೂ ಗುತ್ತಿಗೆಗಳನ್ನು ನೀಡುವಿಕೆ ಪ್ರಕ್ರಿಯೆಗಳನ್ನು ಅಧಿಸೂಚನೆಯನ್ನು ಹೊರಡಿಸಲಾದಂತಹ ದಿನಾಂಕದಿಂದ (ಸೆಪ್ಟಂಬರ್ 2013) ಒಂಬತ್ತು ತಿಂಗಳುಗಳ ಒಳಗೆ ಪೂರ್ಣಗೊಳಿಸಬೇಕಿದ್ದಿತು.

ಬೆಂವಿಸಕಂಯು[10] ಸವಿವರ ಯೋಜನಾ ವರದಿಗಳನ್ನು ಸಲ್ಲಿಸುವ ಹಾಗೂ ಅವುಗಳಿಗೆ ಅನುಮೋದನೆಯನ್ನು ಪಡೆಯುವ (ಜನವರಿ/ಫೆಬ್ರವರಿ 2014) ಪರಿಷ್ಕರಿಸಲ್ಪಟ್ಟಂತಹ ಸವಿವರ ಯೋಜನಾ ವರದಿಗಳನ್ನು ಜಾಲತಾಣ ಪೋರ್ಟಲ್‌ಗೆ ಊಡಿಕೆ ಮಾಡುವ (ಮೇ 2014) ಹಾಗೂ ಗುತ್ತಿಗೆಗಳನ್ನು ನೀಡುವ (ನವಂಬರ್ 2014) ಪ್ರಕ್ರಿಯೆಗಳನ್ನು ಅಂತಿಮ ರೂಪಕ್ಕೆ ತರುವಲ್ಲಿ 15 ತಿಂಗಳುಗಳನ್ನು ತೆಗೆದುಕೊಂಡಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

---

[9] ಬೆಂವಿಸಕಂ – ₹ 236.51 ಕೋಟಿ, ಚಾವಿಸನಿ – ₹ 280.23 ಕೋಟಿ, ಗುವಿಸಕಂ – ₹ 499.31 ಕೋಟಿ, ಹುವಿಸಕಂ – ₹ 333.78 ಕೋಟಿ, ಹಾಗೂ ಮಂವಿಸಕಂ – ₹ 397.65 ಕೋಟಿ.

[10] ಆರ್‌ಜಿಜಿವಿವೈ ಅಡಿಯಲ್ಲಿ ಬೆಂವಿಸಕಂ ಮತ್ತು ಚಾವಿಸಕಂ, ಇವೆರಡರಲ್ಲಿ ಪ್ರತಿಯೊಂದರಲ್ಲೂ ಒಂದು ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದಿತು. ಚಾವಿಸಕಂದಲ್ಲಿ ಸವಿವರ ಯೋಜನಾ ವರದಿಯನ್ನು ಸಲ್ಲಿಸುವಲ್ಲಿ ವಿಳಂಬವು ಗಮನಕ್ಕೆ ಬರಲಿಲ್ಲ.

ಯೋಜನೆಯ ವೆಚ್ಚವನ್ನು ಲೆಕ್ಕಹಾಕುವ ಸಲುವಾಗಿ ಸಮೀಕ್ಷೆ, ಗ್ರಾಮಗಳು/ಜನ ವಸತಿ ಪ್ರದೇಶಗಳ ಸುತ್ತಮುತ್ತಲೂ ಚದುರಿದಂತಿದ್ದಂತಹ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸುವುದು, ಸಂಬಂಧಿತ ಕಚೇರಿಗಳು/ಪ್ರಾಧಿಕಾರಗಳಿಂದ ಫಲಾನುಭವಿಗಳ ಪಟ್ಟಿಯನ್ನು ಪಡೆದುಕೊಳ್ಳುವುದು, ಇವೇ ಮುಂತಾದ ಪ್ರಕ್ರಿಯೆಗಳು ಒಳಗೊಂಡಿದ್ದ ಕಾರಣ ಸವಿವರ ಯೋಜನಾ ವರದಿಗಳ ತಯಾರಿಕೆಯಲ್ಲಿ ವಿಳಂಬವಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವೆಂಬರ್ 2021).

***ಶಾಸನಬದ್ಧ ಅನುಮತಿಗಳು***

**2.4**. ಡಿಡಿಯುಜಿಜೆವೈ ಅಡಿಯಲ್ಲಿ ನೀಡಲಾಗಿದ್ದಂತಹ ಮಾರ್ಗಸೂಚಿಗಳ ಅನುಸಾರ, ರಾಜ್ಯ ಸರ್ಕಾರವು ಉಪ–ಸ್ಟೇಷನ್ನುಗಳ ನಿರ್ಮಾಣಕ್ಕಾಗಿ ಅಗತ್ಯವಿದ್ದಂತಹ ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವ ಅಗತ್ಯತೆಯಿದ್ದಿತು ಹಾಗೂ ಶಾಸನಬದ್ಧ ಅನುಮತಿಗಳನ್ನು (ಪ್ರವೇಶದ ಹಕ್ಕು, ಅರಣ್ಯ, ಇತ್ಯಾದಿ) ಪಡೆದುಕೊಳ್ಳುವ ಸಲುವಾಗಿನ ಅನುಕೂಲತೆಗಳನ್ನು ಕಲ್ಪಿಸಬೇಕಿತ್ತು. ನಿಗದಿತ ಕಾಲಮಿತಿಯೊಳಗೆ ಈ ಅನುಮತಿಗಳನ್ನು ಲಭ್ಯವಿರುವಂತೆ ಮಾಡಬೇಕಿದ್ದಿತು.

ಹುವಿಸಕಂಯಲ್ಲಿ ಮೂರು ಉಪ–ಸ್ಟೇಷನ್ನುಗಳಿಗಾಗಿ, ಮಂವಿಸಕಂಯಲ್ಲಿ 16 ಫೀಡರುಗಳಿಗಾಗಿ ಹಾಗೂ ಚಾವಿಸಕಂಯಲ್ಲಿ 416 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗಾಗಿ ವಿದ್ಯುತೀಕರಣ ಕಾಮಗಾರಿಗಳನ್ನು ಅರಣ್ಯ/ರೈಲ್ವೇ ಇಲಾಖೆಯ ಅನುಮತಿಗಳನ್ನು ಪಡೆದುಕೊಳ್ಳದೆಯೇ ಹಾಗೂ ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೆಯೇ ನೀಡಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಉಪ–ಸ್ಟೇಷನ್ನುಗಳ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ 10ರಿಂದ 24 ತಿಂಗಳುಗಳ ವಿಳಂಬಕ್ಕೆ ದಾರಿ ಮಾಡಿಕೊಟ್ಟಿದ್ದಿತು ಹಾಗೂ ₹ 14.03 ಕೋಟಿ ಮೌಲ್ಯದ ವಿದ್ಯುತ್ ಉಳಿತಾಯಗಳ ನಷ್ಟ (37.21 ದಶಲಕ್ಷ ಯೂನಿಟ್‌ಗಳು – ಎಮ್‌ಯುಗಳು) ಸಂಭವಿಸುವಲ್ಲಿಗೆ (***ಕಂಡಿಕೆ 3.7.1***), 204 ಹಳ್ಳಿಗಳಿಗೆ ಮೂರು ವರ್ಷಗಳಿಗೂ ಮೀರಿದ ಅವಧಿಗೆ 24x7ವಿದ್ಯುತ್ ಸರಬರಾಜಿನಿಂದ ವಂಚಿಸುವಲ್ಲಿಗೆ ದಾರಿಮಾಡಿಕೊಟ್ಟಿದ್ದಿತು ***(ಕಂಡಿಕೆ 3.5)*** ಹಾಗೂ 416 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ನಿಗದಿತ ದಿನಾಂಕದಿಂದ (ಆಗಸ್ಟ್ 2016) ಐದು ವರ್ಷಗಳು ಕಳೆದನಂತರ ವಿದ್ಯುತ್ ವ್ಯವಸ್ಥೆಯನ್ನು ನೀಡಲಾಗಿದ್ದಿತು (ಜುಲೈ 2021) ***(ಕಂಡಿಕೆ 3.12.2).***

ಶಾಸನಬದ್ಧ ಅನುಮತಿಗಳ ವಿವರಗಳನ್ನು ಸವಿವರ ಯೋಜನಾ ವರದಿಗಳಲ್ಲಿ ಸೇರಿಸಲಾಗಿದ್ದಿತಾದರೂ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿಯಷ್ಟೇ ಅನುಮೋದನೆಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವೆಂಬರ್ 2021).

ಸಂಬಂಧಿತ ಪ್ರಾಧಿಕಾರಗಳಿಂದ ಪೂರ್ವಾನುಮತಿಗಳನ್ನು ಖಚಿತಪಡಿಸಿಕೊಳ್ಳದಿರಲು ಕಾರಣಗಳ ಬಗ್ಗೆ ಉತ್ತರವು ಮೌನವಾಗಿದ್ದಿತು. ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬಗಳನ್ನು ಹಾಗೂ ಚಿಂತಿಸಲಾಗಿರುವಂತಹ ಪ್ರಯೋಜನಗಳನ್ನು ಮುಂದೂಡುವುದನ್ನು ತಪ್ಪಿಸುವ ಸಲುವಾಗಿ ಅಗತ್ಯವಿರುವ ಅನುಮತಿಗಳನ್ನು ಸಮಯೋಚಿತವಾಗಿ ಪಡೆದುಕೊಳ್ಳುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕಿದ್ದಿತು.

**ನಿರ್ಣಯ**

ಹತ್ತು ಯೋಜನೆಗಳ ಪೈಕಿ ಪರೀಕ್ಷಾ–ಪರಿಶೀಲನೆ ಮಾಡಲಾದಂತಹ ಎಂಟರಲ್ಲಿ ಸವಿವರ ಯೋಜನಾ ವರದಿಗಳನ್ನು ಸಮರ್ಪಕವಾದಂತಹ ಕ್ಷೇತ್ರ ಸಮೀಕ್ಷೆಯ ನಂತರ ತಯಾರಿಸಿರಲಿಲ್ಲ. ಸವಿವರ ಯೋಜನಾ ವರದಿಗಳಲ್ಲಿನ ವೆಚ್ಚಗಳನ್ನು ಅನೇಕ ಸಲ ಪುನರ್–ಹಂಚಿಕೆ ಮಾಡಲಾಗಿದ್ದಿತು. ಡಿಡಿಯುಜಿಜೆವೈ ಅಡಿಯಲ್ಲಿನ ವಿದ್ಯುತ್ ವಿತರಣಾ ಮೂಲಸೌಕರ್ಯಕ್ಕಾಗಿ ಪ್ರಸ್ತಾವನೆಗಳನ್ನು ಸಂಬಂಧಿತ ನಿರ್ದಿಷ್ಟಪಡಿಸಲಾಗಿದ್ದಂತಹ ಪರಿಮಿತಿಗಳನ್ನು ಪರಿಗಣಿಸದೆಯೇ ಮಾಡಲಾಗಿದ್ದಿತು. ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಗಾಗಿ ಅಗತ್ಯವಿದ್ದಂತಹ ಅರಣ್ಯ/ರೈಲ್ವೇ ಇಲಾಖೆಗಳ ಸಮಯೋಚಿತ ಶಾಸನಬದ್ಧ ಅನುಮತಿಗಳನ್ನು ಖಚಿತಪಡಿಸಿಕೊಂಡಿರಲಿಲ್ಲ. ಈ ಲೋಪದೋಷಗಳು ಅನುಮೋದಿತ ಪರಿಮಾಣಗಳಿಗೆ ಸಂಬಂಧಿಸಿದಂತೆ ವಾಸ್ತವಿಕವಾಗಿ ಕಾರ್ಯಗತಗೊಳಿಸಲಾದಂತಹ ಪರಿಮಾಣಗಳ ನಡುವೆ 11 ಕಿವ್ಯಾ ಮಾರ್ಗಗಳಲ್ಲಿ ಶೇಕಡಾ (–) 0.90 ರಿಂದ ಶೇಕಡಾ 1,642.39ರಷ್ಟು ಹಾಗೂ ಎಲ್‌ಟಿ ಮಾರ್ಗಗಳಲ್ಲಿ ಶೇಕಡಾ (–) 23.04ರಿಂದ ಶೇಕಡಾ 59.93ರಷ್ಟು ಆಗಿದ್ದವು, ಗುತ್ತಿಗೆಗಳನ್ನು ನೀಡುವಲ್ಲಿ ಆರು

ತಿಂಗಳುಗಳಿಗೆ ಪ್ರತಿಯಾಗಿ ನಿರ್ದಿಷ್ಟ ದಿನಾಂಕಗಳಿಂದ 17ರಿಂದ 26 ತಿಂಗಳುಗಳನ್ನು ತೆಗೆದುಕೊಳ್ಳಲಾಗಿದ್ದಿತು ಹಾಗೂ ಉಪ–ಪ್ರಸರಣ ಮತ್ತು ವಿತರಣಾ ಮೂಲಸೌಕರ್ಯಗಳನ್ನು (11 ಕಿವ್ಯಾ/ಎಲ್‌ಟಿ ಮಾರ್ಗಗಳ 16,711.39 ಸಿಕೆಮ್‌ಗಳು ಹಾಗೂ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳ (ಡಿಟಿಸಿಗಳು) 12,301 ಸಂಖ್ಯೆಗಳು) ಬಲಪಡಿಸುವ ಮತ್ತು ಅತ್ಯುತ್ತಮಗೊಳಿಸುವುದರ ಮೇಲಿನ ಹೂಡಿಕೆಯಿಂದ ಪಡೆದುಕೊಳ್ಳಲಾದಂತಹ ಚಿಂತಿಸಲಾಗಿದ್ದಂತಹ ಪ್ರಯೋಜನಗಳನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರಲಿಲ್ಲ.

**ಶಿಫಾರಸುಗಳು**

- ಸರ್ಕಾರವು, ಕಾಮಗಾರಿಗಳನ್ನು ನಿರ್ದಿಷ್ಟ ಕಾಲಮಿತಿಯ ಒಳಗೆ ಪೂರ್ಣಗೊಳಿಸುವ ರೀತಿಯಲ್ಲಿ ಶಾಸನಬದ್ಧ ಪ್ರಾಧಿಕಾರಗಳಿಂದ (ಅರಣ್ಯ, ರೈಲ್ವೇ ಇಲಾಖೆ, ಇತ್ಯಾದಿ) ಸಮಯೋಚಿತವಾದಂತಹ ಅನುಮತಿಗಳನ್ನು ಪಡೆದುಕೊಳ್ಳಲು ಅನುಕೂಲಗಳನ್ನು ಕಲ್ಪಿಸತಕ್ಕದ್ದು ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಿಗೆ ಅಗತ್ಯವಿರುವ ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.

- ವಿದ್ಯುತ್ ಸರಬರಾಜು ಕಂಪನಿಗಳು, ಕಾರ್ಯಗತಗೊಳಿಸುವ ವೇಳೆಯಲ್ಲಿನ ಗಮನಾರ್ಹವಾದಂತಹ ವ್ಯತ್ಯಯಗಳ ಕಾರಣ ಕಾಮಗಾರಿಗಳನ್ನು ಪೂರ್ಣಗೊಳಿಸುವಿಕೆಯಲ್ಲಿನ ವಿಳಂಬಗಳನ್ನು ತಪ್ಪಿಸುವ ಸಲುವಾಗಿ ಸಮರ್ಪಕವಾದಂತಹ ಕ್ಷೇತ್ರ ಸಮೀಕ್ಷೆಯ ನಂತರವೇ ಸವಿವರ ಯೋಜನಾ ವರದಿಗಳನ್ನು ತಯಾರಿಸುವುದನ್ನು ಹಾಗೂ ಯೋಜನೆಯ ಉದ್ದೇಶವು ಈಡೇರಿರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ವಿದ್ಯುತ್ ವಿತರಣಾ ಮೂಲಸೌಕರ್ಯಗಳನ್ನು ಪ್ರಸ್ತಾಪಿಸುವ ವೇಳೆಯಲ್ಲಿ ಅನ್ವಯಗೊಳ್ಳುವ ಸಂಬಂಧಿತ ಪರಿಮಿತಿಗಳನ್ನು ಪರಿಗಣಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**ಹಣಕಾಸು ನಿರ್ವಹಣೆ**

**2.5**. ಭಾರತ ಸರ್ಕಾರವು ಯೋಜನೆಗಳ ಅಡಿಯಲ್ಲಿನ ಪ್ರತಿಯೊಂದು ಯೋಜಿತ ಕಾರ್ಯಕ್ರಮಗಳಿಗೂ (ದೀನದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ (ಡಿಡಿಯುಜಿಜೆವೈ), ಸೌಭಾಗ್ಯ, ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತೀಕರಣ ಯೋಜನೆ(ಆರ್‌ಜಿಜಿವಿವೈ), ವಿಕೇಂದ್ರೀಕೃತ ವಿತರಿಸಲ್ಪಟ್ಟಿರುವ ವಿದ್ಯುತ್ ಉತ್ಪಾದನೆ (ಡಿಡಿಜಿ)) ಪ್ರತ್ಯೇಕವಾಗಿ ಅನುದಾನಗಳನ್ನು ಮಂಜೂರು ಮಾಡಿದ್ದಿತು. ಯೋಜನೆಯ ಮಾರ್ಗಸೂಚಿಗಳ ಅನುಸಾರ, ವಿದ್ಯುತ್ ಸರಬರಾಜು ಕಂಪನಿಗಳು ಡಿಡಿಯುಜಿಜೆವೈ, ಸೌಭಾಗ್ಯ ಯೋಜನೆಗಳ ಅಡಿಯಲ್ಲಿ ಮಂಜೂರಾತಿಗೊಂಡಿರುವ ವೆಚ್ಚದ ಶೇಕಡಾ 60ರಷ್ಟು ಅನುದಾನಕ್ಕೆ ಅರ್ಹತೆಯನ್ನು ಹೊಂದಿದ್ದವು ಹಾಗೂ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತೀಕರಣ ಯೋಜನೆ(ಆರ್‌ಜಿಜಿವಿವೈ) / ವಿಕೇಂದ್ರೀಕೃತ ವಿತರಿಸಲ್ಪಟ್ಟಿರುವ ವಿದ್ಯುತ್ ಉತ್ಪಾದನೆ (ಡಿಡಿಜಿ) ಅಡಿಯಲ್ಲಿ ಶೇಕಡಾ 90ರಷ್ಟು ಅನುದಾನಕ್ಕೆ ಅರ್ಹತೆಯನ್ನು ಹೊಂದಿದ್ದವು. ಅನುಮೋದಿತ ವೆಚ್ಚವನ್ನು ಮೀರಿದಂತೆ ಮಾಡಲಾಗುವ ಯಾವುದೇ ವೆಚ್ಚವನ್ನು ವಿದ್ಯುತ್ ಸರಬರಾಜು ಕಂಪನಿಗಳು ತಮ್ಮ ಸ್ವಂತ ಹಣಕಾಸಿನಿಂದ ಅಥವಾ ಸಾಲಗಳನ್ನು ಪಡೆಯುವುದರ ಮೂಲಕ ಭರಿಸಬೇಕಿದ್ದಿತು. ಈ ಯೋಜನೆಗಳ ಅಡಿಯಲ್ಲಿ ಮಂಜೂರಾತಿಗೊಂಡಿರುವ ವೆಚ್ಚ, ಅನುದಾನ/ಸಹಾಯಾನುಧಾನ ಹಾಗೂ ಭರಿಸಲಾದ ವಾಸ್ತವಿಕ ವೆಚ್ಚ/ಅನುಮೋದಿಸಲಾಗಿರುವ ವೆಚ್ಚಗಳ ವಿವರಗಳನ್ನು ಈ ಕೆಳಗಿನ ಕೋಷ್ಟಕವು ನೀಡುತ್ತದೆ. ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳನ್ನು ***ಅನುಬಂಧ–2ರಲ್ಲಿ*** ನೀಡಲಾಗಿದೆ.

**ಕೋಷ್ಟಕ ಸಂಖ್ಯೆ 2.2: ಫೆಬ್ರವರಿ 2022ರಲ್ಲಿದ್ದಂತೆ ಅನುಮೋದಿತ ಒಟ್ಟಾರೆ ವೆಚ್ಚ ಹಾಗೂ ಭಾರತ ಸರ್ಕಾರವು ಮಂಜೂರು ಮಾಡಿರುವ ಅನುದಾನ ಹಾಗೂ ವಾಸ್ತವಿಕ ವೆಚ್ಚದ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಯೋಜನೆ | ಮಂಜೂರಾತಿ ಗೊಂಡಿರುವ ವೆಚ್ಚ | ಭಾರತ ಸರ್ಕಾರವು ಅನುಮೋದಿಸಿರುವ ಅನುದಾನ/ ಸಹಾಯಾನುಧಾನ | ವಿದ್ಯುತ್ ಸರಬರಾಜು ಕಂಪನಿಗಳು ಭರಿಸಿರುವ ವಾಸ್ತವಿಕ ವೆಚ್ಚ | ಉಳಿತಾಯ (–)/ ಹೆಚ್ಚುವರಿ (5) – (3) |
|---|---|---|---|---|---|
| (1) | (2) | (3) | (4) | (5) | (6) |
| 1 | ಡಿಡಿಯುಜಿಜೆವೈ | 1,747.48 | 1,051.41 | 1,972.97 | 225.49 |
| 2 | ಸೌಭಾಗ್ಯ | 195.81 | 97.79 | 170.13 | (–) 25.68 |
| 3 | ಆರ್‌ಜಿಜಿವಿವೈ–XII ಯೋಜನೆ | 104.41 | 53.78 | 74.17 | (–) 30.24 |
| 4 | ಡಿಡಿಜಿ | 24.90 | 24.54 | 29.31 | 4.41 |
| | **ಒಟ್ಟು** | **2,072.60** | **1,227.52** | **2,246.58** | **173.98** |

**(ಮೂಲ: ಇಂಧನ ಮಂತ್ರಾಲಯ/ ಆರ್‌ಇಸಿ ಮಂಜೂರಾತಿ ಪತ್ರಗಳು, ಅನುಮೋದಿತ ಮುಕ್ತಾಯ ವರದಿಗಳು ಹಾಗೂ ಇಂಧನ ಇಲಾಖೆ/ವಿದ್ಯುತ್ ಸರಬರಾಜು ಕಂಪನಿಗಳಿಂದ ಮಾಹಿತಿ)**

ವಿದ್ಯುತ್ ಸರಬರಾಜು ಕಂಪನಿಗಳು ಈ ಕೆಳಗಿನ ಕಾರಣಗಳಿಂದಾಗಿ ಮಂಜೂರಾತಿಗೊಂಡಿದ್ದ ವೆಚ್ಚಗಳನ್ನು ಮೀರಿದಂತೆ ₹ 173.98 ಕೋಟಿ ಮೊತ್ತದಷ್ಟು ಒಟ್ಟಾರೆ ಅಧಿಕ ವೆಚ್ಚವನ್ನು ಭರಿಸಿದ್ದವು:

- **ಡಿಡಿಯುಜಿಜೆವೈ:** 11 ಕಿವ್ಯಾ ಮತ್ತು ಎಲ್ ಟಿ ಮಾರ್ಗಗಳಿಗೆ ಸಂಬಂಧಿಸಿದಂತೆ ಮಂಜೂರಾತಿಯನ್ನು ಮೀರಿದಂತೆ ವಾಸ್ತವಿಕ ಪರಿಮಾಣಗಳು (ಶೇಕಡಾ–23.04 ಮತ್ತು ಶೇಕಡಾ 1,642.39) (***ಕಂಡಿಕೆ 2.1***) ಸಾಮಗ್ರಿಗಳ ಖರೀದಿಗಳ ಮೇಲೆ ಅಧಿಕ ವೆಚ್ಚಗಳು (***ಕಂಡಿಕೆ 2.8***) ಹಾಗೂ ಗುತ್ತಿಗೆದಾರರುಗಳಿಗೆ ಅಧಿಕ ಟೆಂಡರು ಪ್ರೀಮಿಯಂ ಪಾವತಿ (***ಕಂಡಿಕೆ 3.2***). ಇದು ₹ 225.49 ಕೋಟಿ ಮೊತ್ತದಷ್ಟು ಹೆಚ್ಚುವರಿ ವೆಚ್ಚದಲ್ಲಿ ಪರಿಣಮಿಸಿದ್ದಿತು, ಈ ಹೆಚ್ಚುವರಿ ವೆಚ್ಚಗಳಿಗೆ ಸಂಬಂಧಿಸಿದಂತೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಯಾವುದೇ ಅನುದಾನದ ಅರ್ಹತೆ ಇರಲಿಲ್ಲ. ಸಂಪೂರ್ಣ ಹೆಚ್ಚುವರಿ ವೆಚ್ಚಗಳನ್ನು ವಿದ್ಯುತ್ ಸರಬರಾಜು ಕಂಪನಿಗಳು ಸಾಲಗಳನ್ನು ಪಡೆಯುವುದರ ಮೂಲಕ/ಸ್ವಂತ ಹಣಕಾಸಿನಿಂದ ಭರಿಸಿದ್ದವು.

- **ಸೌಭಾಗ್ಯ /ಡಿಡಿಜಿ:** ಸೌಭಾಗ್ಯ ಯೋಜನೆಯ ಅಡಿಯಲ್ಲಿನ ಉಳಿತಾಯಗಳು ಪ್ರಮುಖವಾಗಿ ಹುವಿಸಕಂಯ ಅಡಿಯಲ್ಲಿ ಮಂಜೂರಾತಿಗೆ ಹೋಲಿಸಿದಂತೆ ವಿದ್ಯುತೀಕರಣ ಸೌಲಭ್ಯವನ್ನು ಒದಗಿಸಲಾದಂತಹ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆಯನ್ನು 8,524ರಷ್ಟು ಇಳಿಮುಖಗೊಳಿಸಿದ್ದರ ಕಾರಣದಿಂದಾಗಿ ಆಗಿದ್ದವು. ವಿಕೇಂದ್ರೀಕೃತ ವಿತರಿಸಲ್ಪಟ್ಟಿರುವ ವಿದ್ಯುತ್ ಉತ್ಪಾದನೆ (ಡಿಡಿಜಿ) ಯೋಜನೆಗೆ ಸಂಬಂಧಿಸಿದಂತೆ, ಅಧಿಕ ವೆಚ್ಚವು ಯೋಜನೆಯ ಅಡಿಯಲ್ಲಿ ಮಂಜೂರಾತಿಗೊಂಡಿದ್ದಕ್ಕಿಂತ ಹೆಚ್ಚಿನ ಸಂಖ್ಯೆಯ ಕುಟುಂಬಗಳಿಗೆ (ಚಾವಿಸನಿದ ಅಡಿಯಲ್ಲಿ 799 ಹಾಗೂ ಮಂವಿಸಕಂ ಅಡಿಯಲ್ಲಿ 25) ವಿದ್ಯುತೀಕರಣ ವ್ಯವಸ್ಥೆಯನ್ನು ಕಲ್ಪಿಸಿದ್ದ ಕಾರಣದಿಂದ ಆಗಿದ್ದಿತು (***ಅನುಬಂಧ–3***).

- **ಆರ್‌ಜಿಜಿವಿವೈ XII ಯೋಜನೆ:** ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಚಾವಿಸನಿದಲ್ಲಿ ಎರಡು ಗುತ್ತಿಗೆಗಳನ್ನು ಅವಧಿಗೆ ಮುಂಚಿತವಾಗಿ ಹಾಗೂ ಗುವಿಸಕಂಯಲ್ಲಿ ಒಂದು ಗುತ್ತಿಗೆಯನ್ನು ಅವಧಿಗೆ ಮುಂಚಿತವಾಗಿ ಮುಕ್ತಾಯಗೊಳಿಸಿದ್ದರ ಪ್ರಮುಖ ಕಾರಣದಿಂದ ಉಳಿತಾಯಗಳು ಸಂಭವಿಸಿದ್ದವು. ಇದು ₹ 25.17 ಕೋಟಿ ಮೊತ್ತದಷ್ಟು ಸಹಾಯಧನವು ನಷ್ಟವಾಗುವಲ್ಲಿಯೂ ಪರಿಣಮಿಸಿದ್ದಿತು (***ಕಂಡಿಕೆಗಳು 3.11.3, 3.11.4***). ಅಲ್ಲದೆಯೇ, ವಿದ್ಯುತ್ ಸರಬರಾಜು ಕಂಪನಿಗಳು ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸಂಬಂಧಿಸಿದಂತೆ ವಿದ್ಯುತೀಕರಣ ವ್ಯವಸ್ಥೆಯನ್ನು ಕಲ್ಪಿಸುವುದರ ಮೇಲೆ ಅಧಿಕ ವೆಚ್ಚವನ್ನು ಭರಿಸಿದ್ದವು (***ಕಂಡಿಕೆ 3.11.2***).

***ಯೋಜನೆಗಳ ನಿರ್ವಹಣಾ ಸಂಸ್ಥೆಗೆ (ಪಿಎಂಎ) ಟೆಂಡರುಗಳನ್ನು ಆಹ್ವಾನಿಸದೆಯೇ ಶುಲ್ಕ ನಿಗದಿಗೊಳಿಸಿದ್ದುದು***

**2.6**. ಡಿಡಿಯುಜಿಜೆವೈ ಅಡಿಯಲ್ಲಿನ ಮಾರ್ಗಸೂಚಿಗಳ ಅನುಸಾರ, ಯೋಜನೆಗಳ ನಿರ್ವಹಣಾ ಸಂಸ್ಥೆಯನ್ನು (ಪಿಎಂಎ) ಉಪಯೋಗಿಸಿಕೊಳ್ಳುವ ಸಂಸ್ಥೆ/ಕಚೇರಿವಾರು, ಅವರುಗಳಿಗೆ ಯೋಜನಾ ನಿರ್ವಹಣೆಯಲ್ಲಿ ಸಹಾಯ ಮಾಡುವ ಸಲುವಾಗಿ ಹಾಗೂ ಯೋಜನೆಗಳನ್ನು ಸಮಯೋಚಿತವಾಗಿ ಕಾರ್ಯಗತಗೊಳಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ನೇಮಕ ಮಾಡಬೇಕಿದ್ದಿತು. ಯೋಜನಾ ನಿರ್ವಹಣಾ ಸಂಸ್ಥೆಗೆ ಶುಲ್ಕ ಪಾವತಿಗಾಗಿ ಅನುಮೋದಿತ ಯೋಜನಾ ವೆಚ್ಚ/ಮೌಲ್ಯದ ಅಥವಾ ನೀಡಲಾಗಿರುವ ವೆಚ್ಚ/ಮೌಲ್ಯದ, ಶೇಕಡಾ –0.5ರಷ್ಟು, ಇವುಗಳಲ್ಲಿ ಯಾವುದು ಕಡಿಮೆಯೋ, ಅಂತಹ ಮೊತ್ತವನ್ನು ಅನುದಾನವಾಗಿ ಮಂಜೂರು ಮಾಡಲಾಗಿದ್ದಿತು. ಅನುದಾನದ ಮೊತ್ತವನ್ನು ಮೀರಿದಂತೆ ಯೋಜನಾ ನಿರ್ವಹಣಾ ಸಂಸ್ಥೆಗೆ ಪಾವತಿಸಬೇಕಾದ ಯಾವುದೇ ಶುಲ್ಕವನ್ನು ವಿದ್ಯುತ್ ಸರಬರಾಜು ಕಂಪನಿಗಳು ಭರಿಸಬೇಕಿದ್ದಿತು. ಯೋಜನಾ ನಿರ್ವಹಣಾ ಸಂಸ್ಥೆಯನ್ನು 33 ತಿಂಗಳುಗಳಿಗೆ ಅಂದರೆ ಸವಾಲು ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವಿಕೆಗಾಗಿ ಆರು ತಿಂಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಸಲುವಾಗಿ 24 ತಿಂಗಳುಗಳು ಹಾಗೂ ಕಾಮಗಾರಿಗಳು ಪೂರ್ಣಗೊಂಡನಂತರ ಸಂಬಂಧಿತ ಕಾರ್ಯಚಟುವಟಿಕೆಗಳಿಗಾಗಿ ಮೂರು ತಿಂಗಳುಗಳಿಗೆ ನೇಮಕ ಮಾಡಿಕೊಳ್ಳಬೇಕಿದ್ದಿತು.

ಯೋಜನಾ ನಿರ್ವಹಣಾ ಸಂಸ್ಥೆಯನ್ನು ಯಾವುದಾದರೂ ಕೇಂದ್ರ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಅಥವಾ ಸವಾಲುಗಳನ್ನು ಆಹ್ವಾನಿಸುವ ಮೂಲಕ ನೇಮಕ ಮಾಡಿಕೊಳ್ಳತಕ್ಕದ್ದು ಎಂಬುದಾಗಿಯೂ ಮಾರ್ಗಸೂಚಿಗಳು ನಿರ್ದಿಷ್ಟಪಡಿಸಿದ್ದವು. ಆದಾಗ್ಯೂ, ಡಿಡಿಯುಜಿಜೆವೈಯಡಿಯಲ್ಲಿ ಯೋಜನಾ ನಿರ್ವಹಣಾ ಸಂಸ್ಥೆಯ ಸೇವೆಯನ್ನು ಮತ್ತು ಇತರ ಸಂಬಂಧಿತ ಇಂಧನ ಸಲಹಾ ಸೇವೆಯನ್ನು ಬಾಡಿಗೆಗೆ ತೆಗೆದುಕೊಳ್ಳುವ ಸಲುವಾಗಿ ಸ್ಪರ್ಧಾತ್ಮಕ ಸವಾಲು ಆಹ್ವಾನಿಸುವ ಮಾರ್ಗವನ್ನು ಅನುಸರಿಸುವಂತೆ ಇಂಧನ ಮಂತ್ರಾಲಯವು ಕರ್ನಾಟಕ ಸರ್ಕಾರದ ಇಂಧನ ಇಲಾಖೆಗೆ ಸಲಹೆ ನೀಡಿದ್ದಿತು (ಏಪ್ರಿಲ್ 2015). ಈ ಕೆಳಗಿನ ಕೋಷ್ಟಕವು ವಿದ್ಯುತ್ ಸರಬರಾಜು ಕಂಪನಿಗಳು ಯೋಜನಾ ನಿರ್ವಹಣಾ ಸಂಸ್ಥೆಗಳನ್ನು ನೇಮಕ ಮಾಡಿದ್ದರ ಬಗ್ಗೆ ವಿವರಗಳನ್ನು ತಿಳಿಸುತ್ತದೆ.

**ಕೋಷ್ಟಕ ಸಂಖ್ಯೆ 2.3: ಯೋಜನಾ ನಿರ್ವಹಣಾ ಸಂಸ್ಥೆಗಳ ನೇಮಕಾತಿಯ ಮೇಲೆ ಭರಿಸಲಾದ ಹೆಚ್ಚುವರಿ/ಅಧಿಕ ವೆಚ್ಚದ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿಸಕಂ | ಅನುಮೋದಿತ ಯೋಜನಾ ವೆಚ್ಚ | ಶೇಕಡಾ 0.5ರ ದರದಲ್ಲಿ ಅರ್ಹತೆ ಇದ್ದಂತಹ ಅನುದಾನ | ಶೇಕಡಾ 1.5ರ ದರದಲ್ಲಿ ನಿಗದಿಗೊಳಿಸಲಾಗಿದ್ದ ವಾಸ್ತವಿಕ ಶುಲ್ಕ | ಹೆಚ್ಚುವರಿ ವೆಚ್ಚ |
|---|---|---|---|---|---|
| 1 | ಬೆಂವಿಸಕಂ | 236.51 | 1.18 | 3.53 | 2.35 |
| 2 | ಚಾವಿಸನಿ | 280.23 | 1.40 | 4.18 | 2.78 |
| 3 | ಗುವಿಸಕಂ | 499.31 | 2.50 | 8.01 | 5.51 |
| 4 | ಹುವಿಸಕಂ | 333.78 | 1.67 | 4.98 | 3.31 |
| 5 | ಮಂವಿಸಕಂ | 397.65 | 1.99 | 5.93 | 3.94 |
| | **ಒಟ್ಟು** | **1,747.48** | **8.74** | **26.63** | **17.89** |

**(ಮೂಲ: ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತದಿಂದ ಮಂಜೂರಾತಿ, ಯೋಜನಾ ನಿರ್ವಹಣಾ ಸಂಸ್ಥೆಯೊಂದಿಗಿನ ಒಡಂಬಡಿಕೆ)**

ಎಲ್ಲಾ ಐದು ವಿಸಕಂಗಳೂ ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮ, 1999ರ [11] ಪರಿಚ್ಛೇದ 4ಜಿ ಅಡಿಯಲ್ಲಿ ವಿನಾಯಿತಿಯನ್ನು ಉಪಯೋಗಿಸಿಕೊಳ್ಳುವ ಮೂಲಕ ಟೆಂಡರುಗಳನ್ನು ಆಹ್ವಾನಿಸದೆಯೇ ಗ್ರಾಮೀಣ ವಿದ್ಯುತೀಕರಣ ನಿಗಮ ವಿದ್ಯುತ್ ಅಭಿವೃದ್ಧಿ ನಿಗಮ ನಿಯಮಿತವನ್ನು (ಆರ್‌ಇಸಿಪಿಡಿಸಿಎಲ್) ಯೋಜನಾ ನಿರ್ವಹಣಾ ಸಂಸ್ಥೆಯನ್ನಾಗಿ ನೇಮಕ ಮಾಡಿಕೊಂಡವು (ಜೂನ್ 2015 ಮತ್ತು ಅಕ್ಟೋಬರ್ 2015ರ ನಡುವೆ) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆಯೇ, ಯಾವುದೇ ಆಧಾರವನ್ನು ದಾಖಲಿಸದೆಯೇ ಗುತ್ತಿಗೆ ದರವನ್ನು ಯೋಜನೆಯ ಅಡಿಯಲ್ಲಿ ಅನುವು ಮಾಡಲಾಗಿದ್ದಂತಹ ಶೇಕಡಾ 0.5ಕ್ಕೆ ಪ್ರತಿಯಾಗಿ ಸವಿವರ ಯೋಜನಾ ವರದಿಯಲ್ಲಿನ ವೆಚ್ಚದ ಶೇಕಡಾ 1.50ರಷ್ಟಕ್ಕೆ

[11] ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಪರಿಚ್ಛೇದ 4ಜಿ ಅನುಸಾರ, ಸರ್ಕಾರವು ಟೆಂಡರುಗಳನ್ನು ಆಹ್ವಾನಿಸದೆಯೇ ಕೆಲವು ನಿರ್ದಿಷ್ಟ ಖರೀದಿಗಳನ್ನು ಮಾಡಲು/ಸೇವೆಗಳನ್ನು ಪಡೆದುಕೊಳ್ಳಲು ಅನುವಾಗುವಂತೆ ವಿನಾಯಿತಿಯನ್ನು ನೀಡಿ ಅಧಿಸೂಚನೆಯನ್ನು ನೀಡಬಹುದು.

ನಿಗದಿಗೊಳಿಸಲಾಗಿದ್ದಿತು. ತತ್ಪರಿಣಾಮವಾಗಿ ವಿದ್ಯುತ್ ಸರಬರಾಜು ಕಂಪನಿಗಳು ₹ 17.89 ಕೋಟಿ ಮೊತ್ತದಷ್ಟು ಹೆಚ್ಚುವರಿ ವೆಚ್ಚಗಳನ್ನು ಭರಿಸಿದ್ದವು.

ಮೆ. ಆರ್‌ಇಸಿಪಿಡಿಸಿಎಲ್, ಇವರನ್ನು ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮದ ಪರಿಚ್ಛೇದ 4(ಜಿ) ಅಡಿಯಲ್ಲಿ ವಿನಾಯಿತಿಯನ್ನು ಕೋರಿದನಂತರ ಪರಸ್ಪರ ಒಪ್ಪಿಕೊಳ್ಳಲಾದಂತಹ ದರಗಳಂತೆ ಯೋಜನಾ ನಿರ್ವಹಣಾ ಸಂಸ್ಥೆಯನ್ನಾಗಿ ನೇಮಕ ಮಾಡಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವಂಬರ್ 2021). ಮೆ. ಆರ್‌ಇಸಿಪಿಡಿಸಿಎಲ್, ಇವರನ್ನು ನೇಮಕ ಮಾಡುವ ವೇಳೆಯಲ್ಲಿ ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತದಿಂದ (ಆರ್‌ಇಸಿ) ಅನುಮತಿಗಳು ಮತ್ತು ಅನುಮೋದನೆಗಳನ್ನು ಸುಲಭವಾಗಿ ಪಡೆಯಬಹುದಾದ ಹಾಗೂ ಸವಾಲು ಪ್ರಕ್ರಿಯೆಯಲ್ಲಿನ ಕಾಲ ವಿಳಂಬವನ್ನು ಪರಿಗಣಿಸಲಾಗಿದ್ದಿತು ಎಂಬುದಾಗಿಯೂ ತಿಳಿಸಿತು.

ಯೋಜನಾ ನಿರ್ವಹಣಾ ಸಂಸ್ಥೆಯನ್ನು ನೇಮಕ ಮಾಡಲು ಪರಿಗಣಿಸಲಾಗಿದ್ದಂತಹ ದರಗಳು ಯೋಜನೆಯಲ್ಲಿ ಅನುವು ಮಾಡಿದ್ದುದಕ್ಕಿಂತ ಬಹಳಷ್ಟು ಅಧಿಕ ಪ್ರಮಾಣದಲ್ಲಿದ್ದುದರಿಂದ ಉತ್ತರವು ಒಪ್ಪುವಂತಿಲ್ಲ. ಇದು ವಿದ್ಯುತ್ ಸರಬರಾಜು ಕಂಪನಿಗಳು ಹೆಚ್ಚುವರಿ ವೆಚ್ಚಗಳನ್ನು ಭರಿಸುವಲ್ಲಿ ಪರಿಣಮಿಸಿದ್ದಿತು. ಇಂಧನ ಮಂತ್ರಾಲಯದ ನಿರ್ದೇಶನದ ಅನುಸಾರ ಸವಾಲುಗಳನ್ನು ಆಹ್ವಾನಿಸುವ ಮೂಲಕ ಯೋಜನಾ ನಿರ್ವಹಣಾ ಸಂಸ್ಥೆಯನ್ನು ನೇಮಕ ಮಾಡಿದ್ದಲ್ಲಿ, ಸ್ಪರ್ಧಾತ್ಮಕ ದರಗಳನ್ನು ಪಡೆದುಕೊಳ್ಳಬಹುದಾಗಿದ್ದಿತು.

ಮುಂದುವರೆದು, ನಿಗದಿತ ವೇಳಾಪಟ್ಟಿಯ ಅನುಸಾರ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದ ಕಾರಣದಿಂದಾಗಿ, ವಿದ್ಯುತ್ ಸರಬರಾಜು ಕಂಪನಿಗಳು ಯೋಜನಾ ನಿರ್ವಹಣಾ ಸಂಸ್ಥೆಯ ಸೇವೆಗಳನ್ನು ಮುಂದುವರೆಸಿದ್ದರಿಂದ ಅದು ಈ ಕೆಳಗೆ ವಿವರಿಸಿರುವಂತೆ ಇನ್ನೂ ಹೆಚ್ಚಿನ ಮೊತ್ತದ ಪಾವತಿಯನ್ನು ಮಾಡುವ ಅಗತ್ಯತೆಯನ್ನುಂಟು ಮಾಡಿತು.

**ಯೋಜನಾ ನಿರ್ವಹಣಾ ಸಂಸ್ಥೆಯ ಮೇಲೆ ಭರಿಸಲಾದಂತಹ ಹೆಚ್ಚುವರಿ ವೆಚ್ಚ**

**2.7.** ಯೋಜನಾ ನಿರ್ವಹಣಾ ಸಂಸ್ಥೆಯ (ಮೆ. ಆರ್‌ಇಸಿಪಿಡಿಸಿಎಲ್) ಜೊತೆಯಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಮಾಡಿಕೊಳ್ಳಲಾಗಿರುವ ಒಡಂಬಡಿಕೆಯ ಅನುಸಾರ (ಜೂನ್/ಸೆಪ್ಟಂಬರ್/ಅಕ್ಟೋಬರ್ 2015), ಗುತ್ತಿಗೆ ಅವಧಿಯು ಜೂನ್ 2018 ಮತ್ತು ಅಕ್ಟೋಬರ್ 2018ರ ನಡುವೆ ಮುಕ್ತಾಯಗೊಂಡಿದ್ದಿತು. ಆದಾಗ್ಯೂ, ಡಿಡಿಯುಜಿಜೆವೈ ಅಡಿಯಲ್ಲಿನ ಯೋಜನೆಗಳು ಮೂಲ ನಿರ್ದಿಷ್ಟ ಅವಧಿಯನ್ನು ಮೀರಿದಂತೆ ವಿಳಂಬದೊಂದಿಗೆ ಮಾರ್ಚ್ 2020/ಡಿಸೆಂಬರ್ 2020ರಲ್ಲಿ ಪೂರ್ಣಗೊಂಡಿದ್ದವು. ಪ್ರಮಾಣಾನುಗುಣವಾಗಿ, ಯೋಜನಾ ನಿರ್ವಹಣಾ ಸಂಸ್ಥೆಯ ಗುತ್ತಿಗೆ ಅವಧಿಯನ್ನು ಕೂಡ ವಿಸ್ತರಿಸಲಾಯಿತು[12]. ಈ ಕೆಳಗಿನ ಕೋಷ್ಟಕವು ವಿಸ್ತರಿಸಲ್ಪಟ್ಟಿದ್ದಂತಹ ಗುತ್ತಿಗೆ ಅವಧಿಯಲ್ಲಿ ಭರಿಸಲಾಗಿದ್ದಂತಹ ಹೆಚ್ಚುವರಿ ವೆಚ್ಚಗಳ ವಿವರಗಳನ್ನು ನೀಡುವುದು.

**ಕೋಷ್ಟಕ ಸಂಖ್ಯೆ 2.4: ಯೋಜನಾ ನಿರ್ವಹಣಾ ಸಂಸ್ಥೆಯ ಸೇವೆಗಳನ್ನು ವಿಸ್ತರಿಸಲ್ಪಟ್ಟಿದ್ದ ಅವಧಿಯಲ್ಲಿ ಭರಿಸಲಾಗಿದ್ದಂತಹ ಹೆಚ್ಚುವರಿ ವೆಚ್ಚಗಳ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿಸಕಂ | ಮೂಲ ಗುತ್ತಿಗೆ ಅವಧಿ | ವಿಸ್ತರಿಸಲ್ಪಟ್ಟಿದ್ದ ಗುತ್ತಿಗೆ ಅವಧಿ | ವಿಸ್ತರಿಸಲ್ಪಟ್ಟಿದ್ದ ಅವಧಿ (ತಿಂಗಳುಗಳು) | ಹೆಚ್ಚುವರಿ ವೆಚ್ಚ |
|---|---|---|---|---|---|
| 1 | ಬೆಂವಿಸಕಂ | ಜೂನ್ 2018 | ಡಿಸೆಂಬರ್ 2019 | 18 | 1.25 |
| 2 | ಚಾವಿಸನಿ | ಏಪ್ರಿಲ್ 2018 | ಡಿಸೆಂಬರ್ 2020 | 32 | 0.85 |
| 3 | ಗುವಿಸಕಂ | ಅಕ್ಟೋಬರ್ 2018 | ಡಿಸೆಂಬರ್ 2020 | 26 | 3.81 |
| 4 | ಹುವಿಸಕಂ | ಜುಲೈ 2018 | ಜೂನ್ 2020 | 23 | 2.35 |
| 5 | ಮಂವಿಸಕಂ | ಸೆಪ್ಟಂಬರ್ 2018 | ಡಿಸೆಂಬರ್ 2020 | 27 | 0.27 |
| ಒಟ್ಟು | | | | | **8.53** |

**(ಮೂಲ: ವಿದ್ಯುತ್ ಸರಬರಾಜು ಕಂಪನಿಗಳಿಂದ ಯೋಜನಾ ನಿರ್ವಹಣಾ ಸಂಸ್ಥೆಯೊಂದಿಗೆ ಒಡಂಬಡಿಕೆ, ಗುತ್ತಿಗೆ ಅವಧಿಯ ವಿಸ್ತರಣೆ)**

[12] ಬೆಂವಿಸಕಂ (ಡಿಸೆಂಬರ್ 2019), ಮಂವಿಸಕಂ (ಡಿಸೆಂಬರ್ 2020), ಹುವಿಸಕಂ (ಜೂನ್ 2020), ಗುವಿಸಕಂ (ಡಿಸೆಂಬರ್ 2020) ಹಾಗೂ ಚಾವಿಸನಿ (ಡಿಸೆಂಬರ್ 2020).

ವಿದ್ಯುತ್ ಸರಬರಾಜು ಕಂಪನಿಗಳು ವಿಸ್ತರಿಸಲ್ಪಟ್ಟಿದ್ದ ಗುತ್ತಿಗೆ ಅವಧಿಯಲ್ಲಿ ಭರಿಸಿದ್ದ ಹೆಚ್ಚುವರಿ ವೆಚ್ಚವು ₹ 8.53 ಕೋಟಿ ಆಗಿದ್ದಿತು. ಯೋಜನೆಗಳನ್ನು ನಿಗದಿತ ಕಾಲಮಿತಿಗಳೊಳಗೆ ಪೂರ್ಣಗೊಳಿಸಿದ್ದಲ್ಲಿ ಈ ಹೆಚ್ಚುವರಿ ವೆಚ್ಚವನ್ನು ತಪ್ಪಿಸಬಹುದಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಸಮೀಕ್ಷೆಯಲ್ಲಿನ ಲೋಪದೋಷಗಳು (***ಕಂಡಿಕೆ 2.1***), ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ಅಡಚಣೆಗಳನ್ನು ಪರಿಹರಿಸದಿದ್ದುದು (***ಕಂಡಿಕೆ 3.7.1 ಮತ್ತು 3.5***), ಗುತ್ತಿಗೆದಾರರುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದಿದ್ದುದು (***ಕಂಡಿಕೆ 3.8***), ಇತ್ಯಾದಿಗಳ ಕಾರಣ ಕಾಮಗಾರಿಗಳು ಪೂರ್ಣಗೊಳ್ಳುವಲ್ಲಿ ವಿಳಂಬಗಳಾಗಿದ್ದವು.

ಕಾಮಗಾರಿಗಳನ್ನು ಗುತ್ತಿಗೆದಾರರುಗಳಿಗೆ ನೀಡುವಿಕೆ ಹಾಗೂ ವಿದ್ಯುತ್ ವಿತರಣಾ ಮೂಲಸೌಕರ್ಯ ಕಾಮಗಾರಿಗಳು ಪೂರ್ಣಗೊಳ್ಳುವಿಕೆ, ಟರ್ನ್‌ಕೀ ಗುತ್ತಿಗೆ ಸಂಸ್ಥೆಗಳಿಂದ ವಾಸ್ತವಿಕ ಕ್ಷೇತ್ರ ಸಮೀಕ್ಷೆಯಲ್ಲಿ ತೆಗೆದುಕೊಳ್ಳಲಾದ ಸಮಯ, ಸಂಬಂಧಿತ ಅಧಿಕಾರಿಗಳಿಂದ/ಪ್ರಾಧಿಕಾರಗಳಿಂದ ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳ ಪಟ್ಟಿಯನ್ನು ಪಡೆದುಕೊಳ್ಳುವಿಕೆ, ಇತ್ಯಾದಿಗಳಲ್ಲಿ ಸಂಭವಿಸಿದ ವಿಳಂಬಗಳ ಕಾರಣ ಕಾಮಗಾರಿಗಳನ್ನು ಪೂರ್ಣಗೊಳಿಸುವ ಸಲುವಾಗಿ ಕಾಲಾವಧಿಯನ್ನು ವಿಸ್ತರಿಸುವ ಅಗತ್ಯತೆಯಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವಂಬರ್ 2021).

ಸಮರ್ಪಕವಾದಂತಹ ಕ್ಷೇತ್ರ ಸಮೀಕ್ಷೆ, ಫಲಾನುಭವಿಗಳ ಪಟ್ಟಿಯನ್ನು ಪಡೆದುಕೊಳ್ಳಲು ಸಮಯೋಚಿತ ಕ್ರಮ, ಸಮರ್ಪಕವಾಗಿ ಕಾರ್ಯನಿರ್ವಹಿಸದ ಗುತ್ತಿಗೆದಾರರುಗಳ ವಿರುದ್ಧ ಗುತ್ತಿಗೆ ಷರತ್ತುಗಳ ಅನುಸಾರ ಸೂಕ್ತ ಕ್ರಮಗಳು, ಇತ್ಯಾದಿಗಳ ಮೂಲಕ ವಿಳಂಬಗಳನ್ನು ತಪ್ಪಿಸಬಹುದಾಗಿದ್ದಿತಾದ್ದರಿಂದ ಉತ್ತರವು ಒಪ್ಪುವಂತಿಲ್ಲ.

**ಸಾಮಗ್ರಿಗಳ ಖರೀದಿಯ ಮೇಲೆ ಭರಿಸಲಾದಂತಹ ಹೆಚ್ಚುವರಿ ವೆಚ್ಚ**

**2.8**. ಡಿಡಿಯುಜಿಜೆವೈ ಅಡಿಯಲ್ಲಿನ ಕಾಮಗಾರಿಗಳಲ್ಲಿ ಉಪಯೋಗಿಸಲಾಗುವ ಸಾಮಗ್ರಿಗಳನ್ನು ಮಿತವ್ಯಯತೆಯಿಂದ ಹಾಗೂ ಉತ್ತಮ ಗುಣಮಟ್ಟದೊಂದಿಗೆ ಖರೀದಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಇಂಧನ ಮಂತ್ರಾಲಯವು/ ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತವು (ಆರ್‌ಇಸಿ) ಅಧಿಕ ಮೌಲ್ಯದ ಸಾಮಗ್ರಿಗಳನ್ನು[13] ಕೇಂದ್ರೀಯವಾಗಿ ಪೂರ್ವನಿರ್ಧಾರಿತ ದರಗಳಲ್ಲಿ (ಕೇಂದ್ರ ಖರೀದಿ ದರಗಳು – ಸಿಪಿಪಿ) ಖರೀದಿಸಲು ನಿರ್ಧರಿಸಿದವು (ಡಿಸೆಂಬರ್ 2015). ಆದಾಗ್ಯೂ, ತದನಂತರದಲ್ಲಿ (ಜೂನ್ 2016) ರಾಜ್ಯಗಳು/ವಿದ್ಯುತ್ ಸರಬರಾಜು ಕಂಪನಿಗಳಿಂದ ಸ್ವೀಕರಿಸಲಾದ ಕೋರಿಕೆಯ ಅನುಸಾರ, ರಾಜ್ಯಗಳು ಖರೀದಿಸುವ ದರಗಳು ಕೇಂದ್ರ ಖರೀದಿ ದರಗಳಿಗಿಂತ ಕಡಿಮೆಯಾಗಿದ್ದಲ್ಲಿ, ರಾಜ್ಯಗಳು ನಿರ್ದಿಷ್ಟ ನಿರೂಪಣೆಗಳನ್ನು ತಕ್ಕುದಾದ ರೀತಿಯಲ್ಲಿ ಖಚಿತಪಡಿಸಿಕೊಳ್ಳುವ ಮೂಲಕ ಸ್ವತಃ ತಾವೇ ಸಾಮಗ್ರಿಗಳನ್ನು ಖರೀದಿಸಲು ಸ್ವತಂತ್ರವಾಗಿರುತ್ತವೆ ಎಂಬುದಾಗಿ ಇಂಧನ ಮಂತ್ರಾಲಯವು ತಿಳಿಸಿತು.

ಅದರಂತೆಯೇ, ವಿದ್ಯುತ್ ಸರಬರಾಜು ಕಂಪನಿಗಳು ಪರೀಕ್ಷಾ–ಪರಿಶೀಲನೆ ಮಾಡಲಾದ ಎಂಟು ಯೋಜನೆಗಳಲ್ಲಿ ಟರ್ನ್‌ಕೀ ಗುತ್ತಿಗೆಗಳ ಮೂಲಕ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ್ದವು (2017–18 ರಿಂದ 2020–21). ಈ ಕೆಳಗಿನ ಕೋಷ್ಟಕವು ಕಾಮಗಾರಿಗಳಲ್ಲಿ ಉಪಯೋಗಿಸಲಾದಂತಹ ಅಧಿಕ ಮೌಲ್ಯದ ಸಾಮಗ್ರಿಗಳು ಹಾಗೂ ವಿದ್ಯುತ್ ಸರಬರಾಜು ಕಂಪನಿಗಳು ಭರಿಸಿದ ವೆಚ್ಚಗಳ ವಿವರಗಳನ್ನು ನೀಡುತ್ತದೆ.

[13] ಟ್ರಾನ್ಸ್‌ಫಾರ್ಮರ್‌ಗಳು, ಕಂಡಕ್ಟರ್‌ಗಳು ಮತ್ತು ಏರಿಯಲ್ ಬಂಚ್ ಕೇಬಲ್ ಇತ್ಯಾದಿ.

**ಕೋಷ್ಟಕ ಸಂಖ್ಯೆ 2.5: ಕೇಂದ್ರ ಖರೀದಿ ದರಗಳನ್ನು ಮೀರಿದಂತೆ ಹೆಚ್ಚುವರಿಯಾಗಿ ಭರಿಸಲಾದಂತಹ ವೆಚ್ಚಗಳ ವಿವರಗಳು.**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿಸಕಂ | ಯೋಜನೆಗಳ ಸಂಖ್ಯೆ | ಸಾಮಗ್ರಿ | ಕೇಂದ್ರ ಖರೀದಿ ದರಗಳ ಅನುಸಾರ ಒಟ್ಟು ವೆಚ್ಚ | ವಾಸ್ತವಿಕ ಖರೀದಿ ದರಗಳು | ಹೆಚ್ಚುವರಿ ವೆಚ್ಚ |
|---|---|---|---|---|---|---|
| 1 | ಬೆಂವಿಸಕಂ | 1 | ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರಗಳು (ಡಿಟಿಸಿಗಳು), ಕಂಡಕ್ಟರ್‌ಗಳು, ಎಬಿ ಕೇಬಲ್‌ಗಳು | 20.82 | 27.12 | 6.30 |
| 2 | ಚಾವಿಸನಿ | 1 | | 15.63 | 24.40 | 8.77 |
| 3 | ಗುವಿಸಕಂ | 2 | | 37.02 | 47.26 | 10.24 |
| 4 | ಹುವಿಸಕಂ | 1 | | 1.32 | 1.71 | 0.39 |
| 5 | ಮಂವಿಸಕಂ | 3 | | 46.90 | 60.87 | 13.97 |
| | **ಒಟ್ಟು** | **8** | | **121.69** | **161.36** | **39.67** |

**(ಮೂಲ: ಕೇಂದ್ರ ಖರೀದಿ ದರಗಳು, ಗುತ್ತಿಗೆದಾರರಿಗೆ ನೀಡಲಾಗಿದ್ದ ಕಾಮಗಾರಿಗಳ ವಿವರ, ಯೋಜನೆಗಳನ್ನು ಮುಕ್ತಾಯಗೊಳಿಸಿದ್ದರ ವರದಿಗಳು).**

ಡಿಡಿಯುಜಿಜೆವೈ ಅಡಿಯಲ್ಲಿ ಆಯ್ಕೆ ಮಾಡಲಾಗಿದ್ದಂತಹ ಎಂಟು ಜಿಲ್ಲೆಗಳಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಮೂರು ಪ್ರಮುಖ ಸಾಮಗ್ರಿಗಳಿಗೆ[14] ಸಂಬಂಧಿಸಿದಂತೆ ಕೇಂದ್ರ ಖರೀದಿ ದರಗಳನ್ನು ಮೀರಿದಂತೆ ಹೆಚ್ಚುವರಿ ವೆಚ್ಚಗಳನ್ನು ಭರಿಸಿದ್ದವು, ಆ ರೀತಿ ಭರಿಸಲಾಗಿದ್ದಂತಹ ಹೆಚ್ಚುವರಿ ವೆಚ್ಚಗಳು ₹ 39.67 ಕೋಟಿಯಷ್ಟು ಆಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಂತಹ ಸಾಮಗ್ರಿಗಳ ದರಗಳು ಕೇಂದ್ರ ಖರೀದಿ ದರಗಳಿಗಿಂತ ಕಡಿಮೆ ಪ್ರಮಾಣದಲ್ಲಿರತಕ್ಕದ್ದು ಎಂಬುದಾಗಿ ಇಂಧನ ಮಂತ್ರಾಲಯವು ನಿರ್ದಿಷ್ಟ ನಿರ್ದೇಶನಗಳನ್ನು ನೀಡಿದ್ದ ಹೊರತಾಗಿಯೂ, ಪ್ರಮುಖ ಸಾಮಗ್ರಿಗಳನ್ನು ಅಧಿಕ ದರಗಳಲ್ಲಿ ಖರೀದಿಸುವಲ್ಲಿನ ವಿದ್ಯುತ್ ಸರಬರಾಜು ಕಂಪನಿಗಳ ಕ್ರಮವು ಸಮರ್ಥನೀಯವಾಗಿರಲಿಲ್ಲ. ಇದು ವಿದ್ಯುತ್ ಸರಬರಾಜು ಕಂಪನಿಗಳ ಮೇಲೆ ತಪ್ಪಿಸಬಹುದಾಗಿದ್ದಂತಹ ಹೆಚ್ಚುವರಿ ಹಣಕಾಸಿನ ಹೊರೆಯಾಗಿದ್ದಿತು.

ಇಂಧನ ಇಲಾಖೆ/ವಿದ್ಯುತ್ ಸರಬರಾಜು ಕಂಪನಿಗಳು ತೆಗೆದುಕೊಂಡಂತಹ ನಿರ್ಣಯದ (ಆಗಸ್ಟ್ 2016) ಅನುಸಾರ ಅಧಿಕ ಮೌಲ್ಯದ ಸಾಮಗ್ರಿಗಳಿಗಾಗಿ (ವಿತರಣಾ ಟ್ರಾನ್ಸ್‌ಫಾರ್ಮರುಗಳು, ಕಂಡಕ್ಟರುಗಳು, ಏರಿಯಲ್ ಬಂಚ್ ಕೇಬಲ್ಲುಗಳು) ಇಂಧನ ಮಂತ್ರಾಲಯವು ಅಂತಿಮ ರೂಪಕ್ಕೆ ತಂದಿದ್ದಂತಹ ದರ ಗುತ್ತಿಗೆ ಅಡಿಯಲ್ಲಿನ ಅನುಮೋದಿತ ಮಾರಾಟಗಾರರುಗಳಿಂದ ಘೋಷಿಸಲ್ಪಟ್ಟಿದ್ದಂತಹ ಸರಾಸರಿ ಕೇಂದ್ರ ಖರೀದಿ ದರಗಳನ್ನು ಪರಿಗಣಿಸಿದಂತೆ ಟೆಂಡರುಗಳನ್ನು ಕರೆಯಲಾಗಿತ್ತು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವಂಬರ್ 2021). ಸಾಮಗ್ರಿಗಳ ಖರೀದಿಯನ್ನು ಭಾಗಶಃವಾಗಿ ಇಲಾಖೆಯು ಮಾಡುವುದು ಹಾಗೂ ಭಾಗಶ:ವಾಗಿ ಗುತ್ತಿಗೆದಾರರುಗಳು ಮಾಡುವುದು ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬಗೊಳ್ಳುವಲ್ಲಿ ಪರಿಣಮಿಸಬಹುದು.

ಇಂಧನ ಮಂತ್ರಾಲಯವು ಅನುಮೋದಿಸಿರುವ ದರಗಳನ್ನು ಪರಿಗಣಿಸಿದಂತೆ ಟೆಂಡರುಗಳನ್ನು ಆಹ್ವಾನಿಸಲಾಯಿತಾದರೂ, ಸಾಮಗ್ರಿಗಳನ್ನು ಖರೀದಿಸಲಾದಂತಹ ದರಗಳು ಕೇಂದ್ರ ಖರೀದಿ ದರಗಳಿಗಿಂತ ಅಧಿಕವಾಗಿದ್ದಿತಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ದರಗಳು ಕೇಂದ್ರ ಖರೀದಿ ದರಗಳಿಗಿಂತ ಕಡಿಮೆ ಇದ್ದಲ್ಲಿ ಮಾತ್ರ ಸ್ವತ: ತಾವೇ ಖರೀದಿಸುವ ಸಲುವಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಅನುಮತಿ ನೀಡಲಾಗಿದ್ದಿತು. ಭಾಗಶ: ಖರೀದಿಗಳು ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವನ್ನುಂಟು ಮಾಡಬಹುದು ಎಂಬ ಕಾರಣವು ವಾಸ್ತವಾಂಶಗಳನ್ನು ಆಧಾರಿತವಾಗಿರಲಿಲ್ಲ ಹಾಗೂ ಯೋಜನೆಗಳು ಪೂರ್ಣಗೊಳ್ಳುವಲ್ಲಿ ವಿಳಂಬವಾಗಿದ್ದಿತು ಎಂಬ ವಾಸ್ತವಾಂಶವು ಉಳಿದುಕೊಂಡಿದ್ದಿತು.

***ಹೆಚ್ಚುವರಿ ಹಣಕಾಸಿನ ಹೊರೆ***

**2.9.** ಕಾಮಗಾರಿಗಳ ಗುತ್ತಿಗೆಗಳನ್ನು ನೀಡಿದ ದಿನಾಂಕದಿಂದ 25 ತಿಂಗಳುಗಳ ಒಳಗೆ ಯೋಜನೆಯನ್ನು ಪರಿಪೂರ್ಣಗೊಳಿಸುವಂತೆ ಯೋಜನೆಯ ಮಾರ್ಗಸೂಚಿಗಳು ನಿರ್ದಿಷ್ಟಪಡಿಸಿದ್ದವು, ಅಂದರೆ

[14] ಟ್ರಾನ್ಸ್‌ಫಾರ್ಮರ್‌ಗಳು, ಕಂಡಕ್ಟರ್‌ಗಳು ಮತ್ತು ವಿವಿಧ ಸಾಮರ್ಥ್ಯಗಳ ಏರಿಯಲ್ ಬಂಚ್ ಕೇಬಲ್

ಕಾಮಗಾರಿಗಳನ್ನು ಕಾರ್ಯಗತಗೊಳಿಸಲು 24 ತಿಂಗಳು ಹಾಗೂ ಯೋಜನೆಯನ್ನು ಪರಿಪೂರ್ಣಗೊಳಿಸಿದ್ದರ ಬಗ್ಗೆ ವರದಿಯನ್ನು ಸಲ್ಲಿಸಲು ಒಂದು ತಿಂಗಳು ಆಗಿದ್ದಿತು. ಅನುಮೋದಿತ ಅನುದಾನದ ಶೇಕಡಾ 90ರಷ್ಟನ್ನು ನಿರ್ದಿಷ್ಟ ಮೈಲಿಕಲ್ಲುಗಳನ್ನು ತಲುಪಿದನಂತರ ಮೊದಲ ನಾಲ್ಕು ಕಂತುಗಳಲ್ಲಿ ಬಿಡುಗಡೆಗೊಳಿಸಲಾಗಿದ್ದಿತು.

ಅನುದಾನದ ಅಂತಿಮ ಶೇಕಡಾ 10ರಷ್ಟನ್ನು ಪಡೆದುಕೊಳ್ಳುವ ಸಲುವಾಗಿ ವಿದ್ಯುತ್ ಸರಬರಾಜು ಕಂಪನಿಗಳು ಯೋಜನೆಯನ್ನು ಪೂರ್ಣಗೊಳಿಸಿದ್ದರ ಸಲುವಾಗಿ ಪ್ರಮಾಣಪತ್ರವನ್ನು ಒಂದು ನಿರ್ದಿಷ್ಟ ನಮೂನೆಯಲ್ಲಿ, ಯೋಜನೆಯು ಪೂರ್ಣಗೊಂಡಿರುವುದಕ್ಕೆ ಭರಿಸಲಾದಂತಹ ವೆಚ್ಚ ಹಾಗೂ ಮಾರ್ಗಸೂಚಿಗಳ ಅನುಸಾರ ನಿರ್ದಿಷ್ಟ ಉದ್ದೇಶಗಳನ್ನು ಸಾಧಿಸಿರುವುದರ ಬಗ್ಗೆ ಯೋಜನಾ ನಿರ್ವಹಣಾ ಸಂಸ್ಥೆಯಿಂದ ಒಂದು ವರದಿಯೊಂದಿಗೆ ಸಲ್ಲಿಸುವ ಅಗತ್ಯತೆಯಿದ್ದಿತು. ಯೋಜನೆಗಳು ಪೂರ್ಣಗೊಂಡಿರುವುದು, ಯೋಜನೆಗಳನ್ನು ಪರಿಪೂರ್ಣಗೊಳಿಸುವುದರ ಬಗ್ಗೆ ಪ್ರಸ್ತಾವನೆಗಳ ಸಲ್ಲಿಕೆ ಹಾಗೂ ಸ್ವೀಕರಿಸಲಾಗಿರುವ/ಸ್ವೀಕರಿಸಬೇಕಿರುವ ಅನುದಾನಗಳ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ಸಂಖ್ಯೆ 2.6: ಯೋಜನೆಗಳನ್ನು ಪರಿಪೂರ್ಣಗೊಳಿಸುವುದರ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆಗಳು ಹಾಗೂ ಸ್ವೀಕರಿಸಬೇಕಿರುವ ಅನುದಾನಗಳು.**

| ಕ್ರಮ ಸಂಖ್ಯೆ | ವಿಸಕಂ | ಯೋಜನೆಗಳು ಪೂರ್ಣಗೊಂಡ ದಿನಾಂಕ | ಆರ್‌ಇಸಿಗೆ ಯೋಜನೆಯು ಮುಕ್ತಾಯ ಗೊಂಡಿರುವುದಕ್ಕೆ ಸಂಬಂಧಿತ ಪ್ರಸ್ತಾವನೆಯನ್ನು ಅಂತಿಮವಾಗಿ ಸಲ್ಲಿಸಿದ ದಿನಾಂಕ | ಯೋಜನೆಯು ಮುಕ್ತಾಯ ಗೊಂಡಿರುವುದಕ್ಕೆ ಸಂಬಂಧಿತ ಪ್ರಸ್ತಾವನೆಯನ್ನು ಸಲ್ಲಿಸಲು ತೆಗೆದುಕೊಂಡ ಸಮಯ (ತಿಂಗಳುಗಳು) | ಸ್ವೀಕರಿಸಲಾಗಿರುವ ಅನುದಾನದ ಅಂತಿಮ ಕಂತು (₹ ಕೋಟಿಯಲ್ಲಿ) | ಯೋಜನೆಯನ್ನು ಪೂರ್ಣಗೊಳಿಸಿದ ದಿನಾಂಕದಿಂದ ಅಂತಿಮ ಕಂತನ್ನು ಸ್ವೀಕರಿಸಲು ತೆಗೆದುಕೊಂಡ ಸಮಯ (ತಿಂಗಳುಗಳು) |
|---|---|---|---|---|---|---|
| **ಆರ್‌ಜಿಜಿವಿವೈ** | | | | | | |
| 1 | ಬೆಂವಿಸಕಂ | ಜೂನ್ 2017/ ಡಿಸೆಂಬರ್ 2017 | ಮಾರ್ಚ್ 2021 | 39 | 15.47 (ಮೇ 2021) | 41 |
| 2 | ಹುವಿಸಕಂ | ನವಂಬರ್ 2017 | ನವಂಬರ್ 2020 | 36 | 3.24 | ಸ್ವೀಕರಿಸಿರುವುದಿಲ್ಲ (ಫೆಬ್ರವರಿ 2022 |
| **ಡಿಡಿಯುಜಿಜೆವೈ** | | | | | | |
| 3 | ಬೆಂವಿಸಕಂ | ಮಾರ್ಚ್ 2020 | ಮೇ 2021 | 14 | 14.59 (ಜನವರಿ 2022) | 21 |
| 4 | ಚಾವಿಸನಿ | ಡಿಸೆಂಬರ್ 2020 | ಏಪ್ರಿಲ್ 2021 | 4 | 13.85 (ಜನವರಿ 2022) | 22 |
| 5 | ಗುವಿಸಕಂ | ಡಿಸೆಂಬರ್ 2020 | ಏಪ್ರಿಲ್ 2021 | 4 | 27.18 (ಜನವರಿ 2022) | 22 |
| 6 | ಹುವಿಸಕಂ | ನವಂಬರ್ 2020 | ಜೂನ್ 2021 | 7 | 20.35 (ಫೆಬ್ರವರಿ 2022) | 15 |
| **ಡಿಡಿಜಿ** | | | | | | |
| 7 | ಗುವಿಸಕಂ | ನವಂಬರ್ 2016 | ನವಂಬರ್ 2020 | 48 | 0.96 | ಸ್ವೀಕರಿಸಿರುವುದಿಲ್ಲ (ಫೆಬ್ರವರಿ 2022) |
| 8 | ಚಾವಿಸನಿ | ಜುಲೈ 2021 | ಅಕ್ಟೋಬರ್ 2021 | 3 | 7.46 | ಸ್ವೀಕರಿಸಿರುವುದಿಲ್ಲ (ಫೆಬ್ರವರಿ 2022) |
| | | **ಒಟ್ಟು** | | | **103.10** | |

**(ಮೂಲ: ಪ್ರಗತಿಯ ವರದಿಗಳು, ಯೋಜನೆಗಳನ್ನು ಪರಿಪೂರ್ಣಗೊಳಿಸಿರುವುದಕ್ಕೆ/ಮುಕ್ತಾಯಗೊಳಿಸಿರುವುದಕ್ಕೆ ಸಂಬಂಧಿತ ವರದಿಗಳು, ಆರ್‌ಇಸಿಯಿಂದ ಅನುದಾನ ಬಿಡುಗಡೆ ಆದೇಶಗಳು)**

ಯೋಜನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತಹ ಒಂದು ತಿಂಗಳಿಗೆ ಪ್ರತಿಯಾಗಿ, ಯೋಜನೆಯನ್ನು ಪರಿಪೂರ್ಣಗೊಳಿಸಿದ್ದಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಗಳನ್ನು ಸಲ್ಲಿಸಲು ವಿದ್ಯುತ್ ಸರಬರಾಜು ಕಂಪನಿಗಳು 3ರಿಂದ 48 ತಿಂಗಳುಗಳನ್ನು ತೆಗೆದುಕೊಂಡವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆರ್‌ಜಿಜಿವಿವೈ XIIನೇ ಯೋಜನೆಗೆ ಸಂಬಂಧಿಸಿದಂತೆ ಗಮನಾರ್ಹವಾದಂತಹ ವಿಳಂಬಗಳನ್ನು ಗಮನಿಸಲಾಯಿತು, ಈ ಸಂಬಂಧವಾಗಿ ಬೆಂವಿಸಕಂ ಮತ್ತು ಹುವಿಸಕಂಯು

ಅನುಕ್ರಮವಾಗಿ 39 ತಿಂಗಳುಗಳು ಮತ್ತು 36 ತಿಂಗಳುಗಳನ್ನು ತೆಗೆದುಕೊಂಡಿದ್ದವು. ಅದೇ ರೀತಿಯಲ್ಲಿ, ಗುವಿಸಕಂಯು ಡಿಡಿಜಿ ಅಡಿಯಲ್ಲಿ 48 ತಿಂಗಳುಗಳನ್ನು ಹಾಗೂ ಬೆಂವಿಸಕಂಯು ಡಿಡಿಯುಜಿಜೆವೈ ಅಡಿಯಲ್ಲಿ 14 ತಿಂಗಳುಗಳನ್ನು ತೆಗೆದುಕೊಂಡಿದ್ದವು. ಡಿಡಿಜಿಗೆ ಸಂಬಂಧಿಸಿದಂತೆ ಗುವಿಸಕಂಯಿಂದ ಅಂತಹ ವಿಪರೀತವಾದಂತಹ ವಿಳಂಬಕ್ಕೆ ನಿರ್ದಿಷ್ಟವಾದಂತಹ ಕಾರಣಗಳು ಇರಲಿಲ್ಲವಾದಲ್ಲಿ, ರಾಜೀವ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆ XIIನೇ ಯೋಜನೆಗೆ ಸಂಬಂಧಿಸಿದಂತೆ ವಿಳಂಬವು ಯೋಜನೆಯು ಪರಿಪೂರ್ಣವಾದುದಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಗಳನ್ನು ಅಗತ್ಯ ನಮೂನೆಗಳಲ್ಲಿ ಸಲ್ಲಿಸದಿದ್ದುದು ಹಾಗೂ ಬೆಂವಿಸಕಂ ಮತ್ತು ಹುವಿಸಕಂಯು ಈ ಕೆಳಗಿನಂತೆ ಕೆಲವು ಅಗತ್ಯತೆಗಳನ್ನು ಅನುಸರಣೆ ಮಾಡದಿದ್ದದ್ದು:

- ಬೆಂವಿಸಕಂಯು ಯೋಜನೆಯ ಕಾಮಗಾರಿಗಳು ಪರಿಪೂರ್ಣವಾಗಿರುವುದಕ್ಕೆ ಸಂಬಂಧಿತ ಪ್ರಸ್ತಾವನೆಗಳನ್ನು ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತಕ್ಕೆ (ಆರ್‌ಇಸಿ) ಕಾಮಗಾರಿಗಳು ಪರಿಪೂರ್ಣಗೊಂಡ ದಿನಾಂಕದಿಂದ ಒಂದು ವರ್ಷ ಕಳೆದನಂತರ ಸಲ್ಲಿಸಿದ್ದಿತು, ಯೋಜನೆಯು ಪರಿಪೂರ್ಣವಾಗಿರುವುದಕ್ಕೆ ಸಂಬಂಧಿತ ಪ್ರಸ್ತಾವನೆಗಳ ಸಲ್ಲಿಕೆಯ ನಂತರ ಗ್ರಾಮೀಣ ವಿದ್ಯುತೀಕರಣ ನಿಗಮವು (ಆರ್‌ಇಸಿ) ಕೆಲವು ಪ್ರಶ್ನೆಗಳನ್ನು/ಸ್ಪಷ್ಟನೆಗಳನ್ನು ಕೇಳಿತು (ಡಿಸೆಂಬರ್ 2018/ಆಗಸ್ಟ್ 2019) ಹಾಗೂ ಅವುಗಳಿಗೆ ಉತ್ತರಗಳನ್ನು ಹಾಗೂ ಪರಿಷ್ಕೃತ ಪ್ರಸ್ತಾವನೆಗಳನ್ನು ಜೂನ್ 2019/ನವಂಬರ್ 2019ರಲ್ಲಿ ಸಲ್ಲಿಸಲಾಗಿದ್ದಿತು. ಮುಂದುವರೆದು ಬೆಂವಿಸಕಂಯು ಯೋಜನೆಯ ಕಾಮಗಾರಿಗಳು ಪರಿಪೂರ್ಣವಾಗಿರುವುದಕ್ಕೆ ಸಂಬಂಧಿತ ಪ್ರಸ್ತಾವನೆಗಳಲ್ಲಿ ಮೂರು ಜಿಲ್ಲೆಗಳಲ್ಲಿ (ರಾಮನಗರ, ಕೋಲಾರ ಮತ್ತು ದಾವಣಗೆರೆ) ಕೆಲವು ವೆಚ್ಚಗಳನ್ನು ಪುನರ್–ಹಂಚಿಕೆ ಮಾಡುವ ಮೂಲಕ ಪರಿಷ್ಕರಣೆಗಳನ್ನು ಮಾರ್ಚ್ 2021ರಲ್ಲಿ ಮಾಡಿದ್ದಿತು. ತತ್ಪರಿಣಾಮವಾಗಿ, ಬೆಂವಿಸಕಂಯು ಯೋಜನೆಯ ಕಾಮಗಾರಿಗಳು ಪರಿಪೂರ್ಣಗೊಂಡ ದಿನಾಂಕದಿಂದ (ಡಿಸೆಂಬರ್ 2017) 41 ತಿಂಗಳುಗಳು ಕಳೆದ ನಂತರ ಅನುದಾನದ ಅಂತಿಮ ಕಂತು ₹ 15.47 ಕೋಟಿ ಮೊತ್ತವನ್ನು ಸ್ವೀಕರಿಸಿತು (ಮೇ 2021).

- ಹುವಿಸಕಂಯು ಸಲ್ಲಿಸಿದ್ದಂತಹ (ನವಂಬರ್ 2018) ಯೋಜನೆಯ ಕಾಮಗಾರಿಗಳು ಪರಿಪೂರ್ಣವಾಗಿರುವುದಕ್ಕೆ ಸಂಬಂಧಿತ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ, ಆರ್‌ಇಸಿ (ಸೆಪ್ಟೆಂಬರ್ 2019/ಮೇ 2020), ಹುವಿಸಕಂಯು ಯೋಜನೆಯ ಮಾರ್ಗಸೂಚಿಗಳ ಅನುಸಾರ ಕೈಗೊಳ್ಳದಿದ್ದಂತಹ ಅನೇಕ ಅನುಸರಣಾ ಕ್ರಮಗಳ ಬಗ್ಗೆ ಪ್ರಶ್ನೆಗಳನ್ನು ಎತ್ತಿತು (ಟರ್ನ್‌ಕೀ ಗುತ್ತಿಗೆ ಮೂಲಕ ಕಾರ್ಯಗತಗೊಳಿಸಲಾದ ಪರಿಮಾಣಗಳು ಹಾಗೂ ಇಲಾಖೀಯವಾಗಿ ಕಾರ್ಯಗತಗೊಳಿಸಲಾದ ಪರಿಮಾಣಗಳ ನಡುವೆ ಹೋಲಿಕೆಗಳನ್ನು ಮಾಡದಿದ್ದುದು, ಮೂಲ ಗುತ್ತಿಗೆ ನೀಡಿಕೆ ದಾಖಲೆಗಳನ್ನು, ಗ್ರಾಮವಾರು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ನೀಡಲಾಗಿರುವ ವಿದ್ಯುತ್ ಸಂಪರ್ಕದ ವಿವರಗಳು, ತಾಲ್ಲೂಕು ನಕಾಶೆ, ಜಿಲ್ಲಾ ನಕಾಶೆ, ನಾಮಫಲಕಗಳು, ಗ್ರಾಮವಾರು ವಹಿಸಿಕೊಳ್ಳಲಾಗಿರುವ ಹಾಗೂ ವಹಿಸಿಕೊಡಲಾಗಿರುವ ವರದಿಗಳು ಮತ್ತು ಗ್ರಾಮ ಪಂಚಾಯಿತಿಯಿಂದ ಪ್ರಮಾಣ ಪತ್ರ ಇತ್ಯಾದಿಗಳನ್ನು ಸಲ್ಲಿಸದಿದ್ದುದು). ಇದು ಹುವಿಸಕಂಯು ಯೋಜನೆಯ ಕಾಮಗಾರಿಗಳು ಪರಿಪೂರ್ಣವಾಗಿರುವುದಕ್ಕೆ ಸಂಬಂಧಿತ ಪ್ರಸ್ತಾವನೆಗಳ ಸಲ್ಲಿಕೆಗೆ ಅಗತ್ಯವಿದ್ದಂತಹ ಮೂಲ ಅಗತ್ಯತೆಗಳನ್ನು ಖಚಿತಪಡಿಸಿಕೊಳ್ಳುವಲ್ಲಿ ವಿಫಲಗೊಂಡಿದ್ದಿತು ಎಂಬುದನ್ನು ತೋರಿಸುತ್ತಿದ್ದಿತು ಹಾಗೂ ಅನುಮೋದನೆಗಳು ಹಾಗೂ ಆರ್‌ಇಸಿ ಅನುದಾನದ ಬಾಕಿ ಮೊತ್ತವನ್ನು ಸ್ವೀಕರಿಸುವಲ್ಲಿ ಸಮರ್ಥನೀಯವಲ್ಲದ ವಿಳಂಬಗಳಿಗೆ ಕಾರಣವಾಗಿದ್ದಿತು. ಆರ್‌ಇಸಿ ಯೋಜನೆಯು ಪರಿಪೂರ್ಣವಾಗಿರುವುದಕ್ಕೆ ಸಂಬಂಧಿತ ಪರಿಷ್ಕೃತ ಪ್ರಸ್ಥಾವನೆಗಳನ್ನು ಮಾಚ್ 2021ರಲ್ಲಿ ಅನುಮೋದಿಸಿತು. ಆದಾಗ್ಯೂ, ಅನುದಾನದ ಬಾಕಿ ಮೊತ್ತವನ್ನು (₹ 3.24 ಕೋಟಿ) ಹುವಿಸಕಂಯು ಸ್ವೀಕರಿಸಿರಲಿಲ್ಲ (ಫೆಬ್ರವರಿ 2022).

ಯೋಜನೆಯ ಕಾಮಗಾರಿಗಳು ಪರಿಪೂರ್ಣವಾಗಿರುವುದಕ್ಕೆ ಸಂಬಂಧಿತ ಪ್ರಸ್ತಾವನೆಗಳನ್ನು ಸಲ್ಲಿಸುವಲ್ಲಿ ವಿಸಕಂಗಳಿಂದ[15] ಆದಂತಹ ವಿಳಂಬಗಳ ಕಾರಣ, ಅನುದಾನದ ಅಂತಿಮ ಕಂತು ₹ 103.10 ಕೋಟಿ

[15] ಮಂವಿಸಕಂಗೆ ಸಂಬಂಧಿಸಿದಂತೆ ದೀನದಯಾಳ ಉಪಾಧ್ಯಾಯ ಗ್ರಾಮೀಣ ವಿದ್ಯುತ್ತೀಕರಣ ಯೋಜನೆ ಅಡಿಯಲ್ಲಿನ ಎರಡು ಯೋಜನೆಗಳು ಪೂರ್ಣಗೊಳ್ಳುವುದು ಬಾಕಿಯಿದ್ದು ₹ 26.02 ಕೋಟಿ ಮೊತ್ತದಷ್ಟು ಅಂತಿಮ ಕಂತನ್ನು ಸ್ವೀಕರಿಸಿರುವುದಿಲ್ಲ.

ಮೊತ್ತದ ಪೈಕಿ ₹ 91.44 ಕೋಟಿ ಮೊತ್ತವನ್ನು 15 ತಿಂಗಳುಗಳಿಂದ 41 ತಿಂಗಳುಗಳವರೆಗಿನ ವಿಳಂಬಗಳೊಂದಿಗೆ ಸ್ವೀಕರಿಸಲಾಗಿದ್ದಿತು, ಉಳಿದ ₹ 11.66 ಕೋಟಿ ಮೊತ್ತವನ್ನು (***ಕೋಷ್ಟಕ ಸಂಖ್ಯೆ 2.6***) ಸ್ವೀಕರಿಸುವುದಕ್ಕೆ ಸಂಬಂಧಿಸಿದಂತೆ ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತದಿಂದ (ಆರ್‌ಇಸಿ) ಅನುಮೋದನೆಯು ಬಾಕಿಯಿದ್ದಿತು (ಫೆಬ್ರವರಿ 2022). ತತ್ಪರಿಣಾಮವಾಗಿ, ವಿಸಕಂಗಳು ತಮ್ಮ ಕಾರ್ಯೋಪಯುಕ್ತ ಬಂಡವಾಳಕ್ಕಾಗಿ ಸಾಲಗಳನ್ನು ಪಡೆಯುವುದರ ಮೇಲೆ ಅವಲಂಭಿತಗೊಂಡಿದ್ದವಾದ್ದರಿಂದ ₹ 10.93 ಕೋಟಿ[16], ಮೊತ್ತದಷ್ಟು ಹೆಚ್ಚುವರಿ ಬಡ್ಡಿ ಪಾವತಿ ಹೊರೆಯನ್ನು ಹೊರುವಂತಾಯಿತು.

ಕಾಮಗಾರಿಗಳು ಪರಿಪೂರ್ಣವಾಗಿರುವುದಕ್ಕೆ ಸಂಬಂಧಿತ ಪ್ರಸ್ತಾವನೆಗಳನ್ನು ಸಲ್ಲಿಸುವಲ್ಲಿನ ವಿಳಂಬಗಳಿಗೆ ಯಾವುದೇ ನಿರ್ದಿಷ್ಟ ಕಾರಣಗಳನ್ನು ತಿಳಿಸದಿರುವುದರ ಮೂಲಕ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದಂತಹ ಅಂಶವನ್ನು ಸರ್ಕಾರವು ತನ್ನ ಉತ್ತರದಲ್ಲಿ (ನವಂಬರ್ 2021) ಖಚಿತಪಡಿಸಿತು.

***ಹೆಚ್ಚುವರಿ ಅನುದಾನದ ಸ್ವೀಕೃತಿಗಾಗಿ ಷರತ್ತುಗಳನ್ನು ಪೂರೈಸದಿದ್ದುದು***

**2.10**. ಡಿಡಿಯುಜಿಜೆವೈ ಅಡಿಯಲ್ಲಿನ ಹಣಕಾಸು ವಿತರಣೆ ಮಾರ್ಗಸೂಚಿಗಳ ಅನುಸಾರ, ವಿಸಕಂಗಳು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಂತೆ ಒಟ್ಟಾರೆ ಮಂಜೂರಾತಿಯಾಗಿದ್ದಂತಹ ವೆಚ್ಚಗಳ ಶೇಕಡಾ 15ರಷ್ಟು (₹ 262.12 ಕೋಟಿ[17]) ಹೆಚ್ಚುವರಿ ಅನುದಾನ ಸ್ವೀಕೃತಿಗೆ ಅರ್ಹತೆಯನ್ನು ಹೊಂದಿದ್ದವು.

i. ನಿರ್ದಿಷ್ಟಪಡಿಸಲಾಗಿದ್ದಂತಹ ಮೈಲಿಕಲ್ಲುಗಳ ಅನುಸಾರ ಯೋಜನೆಯನ್ನು ಸಮಯೋಚಿತವಾಗಿ ಪೂರ್ಣಗೊಳಿಸುವುದು;

ii. ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳನ್ನು ಯೋಜನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಮಟ್ಟಕ್ಕೆ ತಗ್ಗಿಸುವುದು; ಹಾಗೂ

iii. ಮೀಟರುಗಳ ಅಳವಡಿಕೆಯ ಮೂಲಕ ಆಗುತ್ತಿರುವ ವಿದ್ಯುತ್ ಬಳಕೆಯ ಆಧಾರದ ಮೇರೆಗೆ ರಾಜ್ಯ ಸರ್ಕಾರವು ಅರ್ಹತೆಯಿರುವಂತಹ ಸಹಾಯಧನವನ್ನು ಮುಂಗಡವಾಗಿ ಬಿಡುಗಡೆಗೊಳಿಸುವುದು.

ವಿಸಕಂಗಳು ಯೋಜನೆಯನ್ನು ವಿಸ್ತರಿಸಲ್ಪಟ್ಟಿದ್ದಂತಹ ಕಾಲಾವಧಿಯ ಒಳಗೆ ಪೂರ್ಣಗೊಳಿಸುವುದರ ಮೂಲಕ ಮೊದಲ ಷರತ್ತನ್ನು ಪೂರೈಸಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಐದು ವಿಸಕಂಗಳ ಪೈಕಿ ಮೂರರಲ್ಲಿ (ಬೆಂವಿಸಕಂ, ಚಾವಿಸನಿ ಮತ್ತು ಮಂವಿಸಕಂ) 2016–17ರಿಂದ 2020–21 ಸಾಲುಗಳಲ್ಲಿ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳು ಯೋಜನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತಹ ಮಟ್ಟವನ್ನು ಮೀರಿದಂತೆ ಆಗಿದ್ದವಾದ್ದರಿಂದ, ಎರಡನೆಯ ಷರತ್ತನ್ನು ಐದು ವಿಸಕಂಗಳ ಪೈಕಿ ಎರಡು ವಿಸಕಂಗಳು (ಗುವಿಸಕಂ ಮತ್ತು ಹುವಿಸಕಂ) ಮಾತ್ರ ಪೂರೈಸಿದ್ದವು, ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

[16] ವಿದ್ಯುತ್ ಸರಬರಾಜು ಕಂಪನಿಗಳು ತಮ್ಮ ಕಾರ್ಯೋಪಯುಕ್ತ ಬಂಡವಾಳದ ಸಲುವಾಗಿ ಸಾಲಗಳನ್ನು ಪಡೆಯಲು ಪಾವತಿಸಲಾದ ವರ್ಷವೊಂದಕ್ಕೆ ಶೇಕಡ 11ರ ದರದಲ್ಲಿ ವಿಳಂಬದ ಅವಧಿಗೆ ಬಡ್ಡಿಯನ್ನು ಲೆಕ್ಕಹಾಕಲಾಗಿರುವುದು.

[17] ಮಂಜೂರಾತಿಯಾಗಿದ್ದ ಒಟ್ಟಾರೆ ವೆಚ್ಚದ ಶೇಕಡ 30ರ ಶೇಕಡಾ 50ರಷ್ಟು (₹ 1,747.48 ಕೋಟಿ).

**ಕೋಷ್ಟಕ ಸಂಖ್ಯೆ 2.7: ಯೋಜನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳು ಹಾಗೂ ವಾಸ್ತವಿಕವಾಗಿ ಸಂಭವಿಸಿದ್ದಂತಹ ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳು**

| ವಿಸಕಂಗಳು | ಮೂಲ ವರ್ಷ (2012–13) | 2016–17 | | 2017–18 | | 2018–19 | | 2019–20 | | 2020–21 | |
|---|---|---|---|---|---|---|---|---|---|---|---|
| | | ಯೋಜನೆಯ ಅಡಿಯಲ್ಲಿ ನಿರ್ದಿಷ್ಟ ಪಡಿಸಲಾಗಿರುವ ಮಟ್ಟ | ವಾಸ್ತವಿಕಗಳು | ಯೋಜನೆಯ ಅಡಿಯಲ್ಲಿ ನಿರ್ದಿಷ್ಟ ಪಡಿಸಲಾಗಿರುವ ಮಟ್ಟ | ವಾಸ್ತವಿಕಗಳು | ಯೋಜನೆಯ ಅಡಿಯಲ್ಲಿ ನಿರ್ದಿಷ್ಟ ಪಡಿಸಲಾಗಿರುವ ಮಟ್ಟ | ವಾಸ್ತವಿಕಗಳು | ಯೋಜನೆಯ ಅಡಿಯಲ್ಲಿ ನಿರ್ದಿಷ್ಟ ಪಡಿಸಲಾಗಿರುವ ಮಟ್ಟ | ವಾಸ್ತವಿಕಗಳು | ಯೋಜನೆಯ ಅಡಿಯಲ್ಲಿ ನಿರ್ದಿಷ್ಟ ಪಡಿಸಲಾಗಿರುವ ಮಟ್ಟ | ವಾಸ್ತವಿಕಗಳು |
| ಬೆಂವಿಸಕಂ | 20.45 | 14.23 | 14.88 | 13.37 | 10.28 | 12.72 | 15.92 | 11.87 | 17.62 | 11.51 | 13.05 |
| ಗುವಿಸಕಂ | 18.28 | 23.92 | 19.51 | 23.41 | 5.92 | 22.84 | 14.48 | 22.44 | 13.02 | 21.72 | 14.53 |
| ಹುವಿಸಕಂ | 20.44 | 18.99 | 15.56 | 18.56 | 15.37 | 17.96 | 14.62 | 17.43 | 17.04 | 17.00 | 15.51 |
| ಮಂವಿಸಕಂ | 14.57 | 12.08 | 12.11 | 11.65 | 13.36 | 11.28 | 11.90 | 10.79 | 14.85 | 9.92 | 12.05 |
| ಚಾವಿಸನಿ | 30.42 | 14.92 | 15.09 | 14.27 | 13.76 | 13.59 | 15.78 | 12.99 | 14.45 | 12.51 | 14.73 |

**(ಮೂಲ: ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತವು ನೀಡಿರುವ ಯೋಜನಾ ಮಾರ್ಗಸೂಚಿಗಳು, ವಿಸಕಂಗಳ ವಾರ್ಷಿಕ ವರದಿಗಳು)**

ಮುಂದುವರೆದು, ಮೀಟರುಗಳನ್ನು ಅಳವಡಿಸದ ನೀರಾವರಿ ಪಂಪು ಸೆಟ್ಟುಗಳ ಸ್ಥಾಪನೆಗಳು[18]. ಇದ್ದವಾದ್ದರಿಂದ, ರಾಜ್ಯ ಸರ್ಕಾರವು ವರಮಾನ ಸಹಾಯಧನವನ್ನು ಮೀಟರುಗಳ ಅಳವಡಿಕೆಯ ಆಧಾರದ ಮೇರೆಗೆ ವಿದ್ಯುತ್ ಬಳಕೆಯ ಮೇಲೆ ನೀಡುವ ಬದಲು ಅಂದಾಜಿನ ಮೇರೆಗೆ ಪಾವತಿಸುತ್ತಿದ್ದಿತಾದ್ದರಿಂದ ಮೂರನೇ ಷರತ್ತನ್ನು ಯಾವುದೇ ವಿಸಕಂಗಳು ಪೂರೈಸಿರಲಿಲ್ಲ. 31 ಮಾರ್ಚ್ 2021ರಲ್ಲಿದ್ದಂತೆ, ಬೆಂವಿಸಕಂಯಲ್ಲಿ 9.03 ಲಕ್ಷ ಸಂಖ್ಯೆಗಳಷ್ಟು, ಹುವಿಸಕಂಯಲ್ಲಿ 9.59 ಲಕ್ಷ ಸಂಖ್ಯೆಗಳಷ್ಟು, ಚಾವಿಸನಿದಲ್ಲಿ 3.84 ಲಕ್ಷ ಸಂಖ್ಯೆಗಳಷ್ಟು, ಗುವಿಸಕಂಯಲ್ಲಿ 2.01 ಲಕ್ಷ ಸಂಖ್ಯೆಗಳಷ್ಟು ಹಾಗೂ ಮಂವಿಸಕಂಯಲ್ಲಿ 1.38 ಲಕ್ಷ ಸಂಖ್ಯೆಗಳಷ್ಟು ಮೀಟರುಗಳನ್ನು ಅಳವಡಿಸದ ನೀರಾವರಿ ಪಂಪು ಸೆಟ್ಟುಗಳ ಸ್ಥಾಪನೆಗಳಿದ್ದವು

ಈ ರೀತಿಯಾಗಿ ಯಾವುದೇ ವಿಸಕಂಗಳು ಯೋಜನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತಹ ಎಲ್ಲಾ ಮೂರು ಷರತ್ತುಗಳನ್ನು ಪೂರೈಸಿರಲಿಲ್ಲವಾದ್ದರಿಂದ ವಿಸಕಂಗಳು ಹೆಚ್ಚುವರಿ ಅನುದಾನಕ್ಕೆ ಅರ್ಹತೆಯನ್ನು ಹೊಂದಿರದಿರಬಹುದು, ಇದರಿಂದಾಗಿ ₹ 262.12 ಕೋಟಿ ಮೊತ್ತದಷ್ಟು ಹೆಚ್ಚುವರಿ ಅನುದಾನದ ಸ್ವೀಕೃತಿಯು ಅನುಮಾನಾಸ್ಪದವಾಗಿದ್ದಿತು. ಅಂತಹ ಬಂಡವಾಳ ವೆಚ್ಚಗಳನ್ನು ವಿದ್ಯುತ್ ದರಪಟ್ಟಿಯಲ್ಲಿ ವಿದ್ಯುತ್ ದರಗಳನ್ನು ಲೆಕ್ಕಹಾಕುವ ಸಲುವಾಗಿ ಪರಿಗಣಿಸಲಾಗುವುದಾದ್ದರಿಂದ ಹಾಗೂ ಅದನ್ನು ವಿದ್ಯುತ್ ಬಳಕೆದಾರರುಗಳಿಂದ ವಸೂಲಾತಿ ಮಾಡಲಾಗುವುದರಿಂದ, ಇದು ವಿದ್ಯುತ್ ಬಳಕೆದಾರರುಗಳ ಮೇಲೆ ಹೆಚ್ಚುವರಿ ಹಣಕಾಸಿನ ಹೊರೆಯಾಗಬಹುದು.

ಡಿಡಿಯುಜಿಜೆವೈಗಾಗಿ ಡಿಸೆಂಬರ್ 2020ರವರೆಗೆ ಕಾಲಾವಧಿ ವಿಸ್ತರಣೆಯನ್ನು ನೀಡಲಾಗಿದ್ದಿತು ಹಾಗೂ ಕಾಮಗಾರಿಗಳನ್ನು ಆ ರೀತಿ ವಿಸ್ತರಿಸಲ್ಪಟ್ಟಿದ್ದಂತಹ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗಿದ್ದಿತು ಎಂಬುದಾಗಿ ಸರ್ಕಾರವು ತಿಳಿಸಿತು (ನವಂಬರ್ 2021) ಚಾವಿಸನಿದಲ್ಲಿನ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳು ಯೋಜನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತಹ ಮಟ್ಟಕ್ಕೆ ಸಮೀಪವಾಗಿದ್ದವಾದಲ್ಲಿ ಗುವಿಸಕಂಯಲ್ಲಿ ಅದನ್ನು ಸಾಧಿಸಲಾಗಿದ್ದಿತು. ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಯು (ಎಸ್‌ಎಲ್‌ಎಸ್‌ಸಿ) ಹೆಚ್ಚುವರಿ ಅನುದಾನದ ಮಂಜೂರಾತಿಗಾಗಿ ಶಿಫಾರಸು ಮಾಡಿರುವುದು.

ಐದು ವಿಸಕಂಗಳ ಪೈಕಿ ಮೂರರಲ್ಲಿ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳನ್ನು ಯೋಜನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತಹ ಮಟ್ಟಕ್ಕೆ ತಗ್ಗಿಸಿರಲಿಲ್ಲ ಹಾಗೂ ಅಲ್ಲದೆಯೇ ನೀರಾವರಿ ಪಂಪು ಸೆಟ್ಟುಗಳ ಮೇಲಿನ ಮುಂಗಡ ಸಹಾಯಧನವನ್ನು ಎಲ್ಲಾ ವಿಸಕಂಗಳಿಗೆ ಅಂದಾಜು/ನಿರ್ಧಾರಣೆಯ ಆಧಾರದ ಮೇರೆಗೆ ಬಿಡುಗಡೆಗೊಳಿಸಲಾಗಿದ್ದಿತು, ಇದರಿಂದಾಗಿ ವಿಸಕಂಗಳು ಹೆಚ್ಚುವರಿ ಅನುದಾನದ ಸ್ವೀಕೃತಿಗಾಗಿ ಯೋಜನೆಯಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತಹ ಷರತ್ತುಗಳನ್ನು ಪೂರೈಸುವಲ್ಲಿ ವಿಫಲಗೊಂಡಿದ್ದವು.

---

[18] 2014–15ರಿಂದ 2019–20ರಲ್ಲಿ ಒಟ್ಟಾರೆ ಮಾರಾಟಗಳ ಮೀಟರುಗಳನ್ನು ಅಳವಡಿಸಿರದ ಮಾರಾಟಗಳು ಬೆಂವಿಸಕಂಯಲ್ಲಿ ಶೇಕಡಾ 23.57ರಿಂದ 27.77ರವರೆಗೆ, ಚಾವಿಸನಿದಲ್ಲಿ ಶೇಕಡಾ 41.57ರಿಂದ 45.25ರವರೆಗೆ, ಗುವಿಸಕಂಯಲ್ಲಿ ಶೇಕಡಾ 51.45ರಿಂದ ಶೇಕಡಾ 46.10ರವರೆಗೆ, ಹುವಿಸಕಂಯಲ್ಲಿ ಶೇಕಡಾ 57.34ರಿಂದ ಶೇಕಡಾ 53.80ವರೆಗೆ, ಮಂವಿಸಕಂಯಲ್ಲಿ ಶೇಕಡಾ 16.10ರಿಂದ ಶೇಕಡಾ 19.82ರವರೆಗೆ ಆಗಿದ್ದವು.

***ತೆರಿಗೆಯನ್ನು ಮೂಲದಲ್ಲಿಯೇ ಕಡಿದುಕೊಳ್ಳುವಿಕೆ***

**2.11.** ಬೆಂವಿಸಕಂಯು ಆರ್‌ಜಿಜಿವಿವೈ XIIನೇ ಯೋಜನೆಯ ಅಡಿಯಲ್ಲಿನ ಐದು [19] ಯೋಜನೆಗಳಿಗಾಗಿನ ಗುತ್ತಿಗೆಗಳನ್ನು ಮೆ. ಸೀವೆಲ್ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್, ಹೈದರಾಬಾದ್, ಇವರಿಗೆ ಟೆಂಡರ್ ಆಧಾರದ ಮೇಲೆ ನೀಡಿತು (ನವಂಬರ್ 2014). ಯೋಜನೆಗಳನ್ನು ಡಿಸೆಂಬರ್ 2017ರಲ್ಲಿ ಪೂರ್ಣಗೊಳಿಸಲಾಗಿದ್ದಿತು ಹಾಗೂ ಯೋಜನೆಗಳನ್ನು ಪರಿಪೂರ್ಣಗೊಳಿಸಿದ್ದರ ಪ್ರಸ್ತಾವನೆಗಳಿಗೆ ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತವು ಜುಲೈ 2020ರಲ್ಲಿ ಅನುಮೋದನೆ ನೀಡಿದ್ದಿತು. ಈ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಟೆಂಡರಿಗೆ ಇಡಲಾಗಿದ್ದ ಅಂದಾಜು ವೆಚ್ಚ ₹ 51.29 ಕೋಟಿ ಮೊತ್ತವು ಸೇವಾ ತೆರಿಗೆ (ಶೇಕಡಾ 12.36), ಉದ್ಯೋಗಿಗಳ ಭವಿಷ್ಯ ನಿಧಿಗೆ ಕಾಣಿಕೆ (ಶೇಕಡಾ 13.61) ಹಾಗೂ ಉದ್ಯೋಗಿಗಳ ರಾಜ್ಯ ವಿಮೆ (ಶೇಕಡಾ 4.75), ಇವುಗಳನ್ನು ಒಳಗೊಂಡಿದ್ದಿತು. ಯೋಜನೆಯ ಮಾರ್ಗಸೂಚಿಗಳ ಅನುಸಾರ, ಎಲ್ಲಾ ರಾಜ್ಯ ತೆರಿಗೆಗಳನ್ನು ವಿಸಕಂಗಳು/ರಾಜ್ಯ ಸರ್ಕಾರವು ಭರಿಸಬೇಕಿದ್ದಿತು. ತೆರಿಗೆಗಳನ್ನು ಮೂಲದಲ್ಲಿಯೇ ಕಡಿದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯು ಈ ಕೆಳಗೆ ಚರ್ಚಿಸಿರುವಂತೆ ಲೋಪದೋಷಗಳನ್ನು ಗಮನಿಸಿತು:

**ಕೋಷ್ಟಕ ಸಂಖ್ಯೆ 2.8: ಬೆಂವಿಸಕಂಯು ಮೂಲದಲ್ಲಿಯೇ ಕಡಿದುಕೊಂಡಿದ್ದಂತಹ ತೆರಿಗೆಯಲ್ಲಿನ ಲೋಪದೋಷಗಳು**

**(₹ ಲಕ್ಷದಲ್ಲಿ)**

| ಕ್ರಮ ಸಂಖ್ಯೆ | ಗುತ್ತಿಗೆ ಷರತ್ತುಗಳ ಅನುವು | ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶ | ಮೊತ್ತ |
|---|---|---|---|
| 1 | ಅಬಕಾರಿ ಸುಂಕ, CST, VAT, ಇತ್ಯಾದಿಗಳ ಪ್ರತಿಯಾಗಿ ಶಾಸನಬದ್ಧ ಪಾವತಿಗಳನ್ನು ದಾಖಲೆಗಳ ಸಾಕ್ಷಾಧಾರಗಳ ಆಧಾರದ ಮೇರೆಗೆ ಬಿಡುಗಡೆಗೊಳಿಸತಕ್ಕದ್ದು ಎಂಬುದನ್ನು ಗುತ್ತಿಗೆಯ ಸಾಮಾನ್ಯ ಷರತ್ತುಗಳ *ಷರತ್ತು ಸಂಖ್ಯೆ 10* ಅಗತ್ಯತೆ ಹೊಂದಿರುತ್ತದೆ. ಹಾಗೂ ಗುತ್ತಿಗೆದಾರರು ತಯಾರಿಸಿ ಕೊಡುವಂತಹ ಇನ್ವಾಯ್ಸುಗಳನ್ನು ದಾಖಲೆಗಳ ಸಾಕ್ಷಾಧಾರವೆಂಬುದಾಗಿ ಒಪ್ಪಿಕೊಳ್ಳಬೇಕಿದ್ದಿತು. | ಗುತ್ತಿಗೆದಾರರು ಬಿಲ್ಲನ್ನು [20], ಸಲ್ಲಿಸದೆಯೇ ಮೌವತೆಯನ್ನು ಒಪ್ಪಿಕೊಳ್ಳಲಾಗಿದ್ದಿತು, ಇದು ಗುತ್ತಿಗೆಯ ಸಾಮಾನ್ಯ ಷರತ್ತುಗಳ ಷರತ್ತು ಸಂಖ್ಯೆ 10ರ ಉಲ್ಲಂಘನೆಯಾಗಿದ್ದಿತು. | 98.98 |
| 2 | ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕ್ಷೇಮಾಭಿವೃದ್ಧಿ ಸೆಸ್ಸನ್ನು ನಿರ್ಮಾಣ ಬಿಲ್ಲುಗಳಿಂದ ಶೇಕಡಾ 1ರ ದರದಲ್ಲಿ ಮೂಲದಲ್ಲಿಯೇ ಕಡಿದುಕೊಳ್ಳಬೇಕಿದ್ದಿತು. | ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕ್ಷೇಮಾಭಿವೃದ್ಧಿ ಸೆಸ್ಸಿನ ಕಡೆಗೆ ಒಟ್ಟಾರೆ ನಿರ್ಮಾಣ ವೆಚ್ಚದ (₹ 10.75 ಕೋಟಿ) ಮೇಲೆ ಮೂಲದಲ್ಲಿಯೇ ಕಡಿದುಕೊಳ್ಳಬೇಕಿದ್ದ ₹ 10.75 ಲಕ್ಷ ಮೊತ್ತಕ್ಕೆ ಪ್ರತಿಯಾಗಿ ಬೆಂವಿಸಕಂಯು ಕೇವಲ ₹ 5.39 ಲಕ್ಷ ಮೊತ್ತವನ್ನು ಮೂಲದಲ್ಲಿಯೇ ಕಡಿದುಕೊಂಡಿದ್ದಿತು. | 5.36 |
| 3 | ಗುತ್ತಿಗೆಯ ಸಾಮಾನ್ಯ ಷರತ್ತುಗಳ *ಷರತ್ತು ಸಂಖ್ಯೆ 10.5ರ* ಅನುಸಾರ ಬೆಂವಿಸಕಂಯು ಸೇವಾ ತೆರಿಗೆಯನ್ನು ಮೂಲದಲ್ಲಿಯೇ ಕಡಿದುಕೊಳ್ಳುವಲ್ಲಿ ಜವಾಬ್ದಾರಿಯುತವಾಗಿದ್ದಿತು. | ಬೆಂವಿಸಕಂಯು ಅನ್ವಯಗೊಳ್ಳುವ ರೀತಿಯಲ್ಲಿ ಶೇಕಡಾ 12.36ರಷ್ಟು ಸೇವಾ ತೆರಿಗೆಯ ಬದಲಾಗಿ ಶೇಕಡಾ 5.5ರ ದರದಲ್ಲಿ ₹ 65.19 ಲಕ್ಷ ಮೊತ್ತದಷ್ಟು ಕಾಮಗಾರಿಗಳ ಗುತ್ತಿಗೆ ತೆರಿಗೆಯನ್ನು ಮೂಲದಲ್ಲಿಯೇ ಕಡಿದುಕೊಂಡಿದ್ದಿತು. ಕಾಮಗಾರಿಗಳ ಗುತ್ತಿಗೆ ತೆರಿಗೆಯು ರಾಜ್ಯ ತೆರಿಗೆಯಾಗಿರುವುದರಿಂದ ಯೋಜನೆಯ ಅಡಿಯಲ್ಲಿ ಮರುಪಾವತಿಗೆ ಅರ್ಹವಾಗಿರಲಿಲ್ಲ. | 65.19 |

**(ಮೂಲ: ಸ್ಟಾಂಡರ್ಡ್ ಸವಾಲು (ಬಿಡ್) ದಾಖಲೆಗಳು, ಸವಿವರ ಕಾಮಗಾರಿ ನೀಡಿಕೆ ಆದೇಶಗಳು, ಯೋಜನೆಯ ಪರಿಪೂರ್ಣಗೊಂಡಿರುವುದಕ್ಕೆ ಸಂಬಂಧಿತ ವರದಿಗಳು)**

ಈ ನಿಟ್ಟಿನಲ್ಲಿ, ಬೆಂವಿಸಕಂಯ ವಿಭಾಗೀಯ ಕಚೇರಿಗಳಲ್ಲಿ ವಿವರಗಳ ಪರಿಶೀಲನೆಯು ಪ್ರಗತಿಯಲ್ಲಿರುವುದು ಹಾಗೂ ಅಗತ್ಯ ಅನುಪಾಲನಾ ವರದಿಯನ್ನು ಸಲ್ಲಿಸಲಾಗುವುದು ಎಂಬುದಾಗಿ ಸರ್ಕಾರವು ತನ್ನ ಉತ್ತರದಲ್ಲಿ ತಿಳಿಸಿತು (ನವಂಬರ್ 2021).

[19] ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ದಾವಣಗೆರೆ, ಕೋಲಾರ ಮತ್ತು ರಾಮನಗರ.

[20] ಯೋಜನೆಯು ಪರಿಪೂರ್ಣಗೊಂಡಿರುವುದರ ಬಗ್ಗೆ ಸಲ್ಲಿಸಲಾಗಿದ್ದ ಪ್ರಸ್ತಾವನೆಗಳಲ್ಲಿ ಬೆಂವಿಸಕಂಯು ₹ 98.98 ಲಕ್ಷ ಮೊತ್ತವನ್ನು "ಗುತ್ತಿಗೆದಾರರು ಪಾವತಿಸಿದ್ದ ಮೌವತೆ ಬಿಲ್ಲಿನಲ್ಲಿ ತೋರಿಸಲಾಗಿಲ್ಲ" ಎಂಬುದಾಗಿ ತೋರಿಸಿದ್ದಿತು.

**ನಿರ್ಣಯ**

ವಿಸಕಂಗಳು ಮಂಜೂರಾತಿಗೊಂಡಿದ್ದಂತಹ ವೆಚ್ಚಗಳನ್ನು ಮೀರಿದಂತೆ ₹ 173.98 ಕೋಟಿ ಮೊತ್ತದಷ್ಟು ಹೆಚ್ಚುವರಿ ವೆಚ್ಚಗಳನ್ನು ಭರಿಸಿದ್ದವು. ಅಂತಹ ಹೆಚ್ಚುವರಿ ವೆಚ್ಚಗಳಿಗೆ ಯೋಜನೆಯ ಅಡಿಯಲ್ಲಿ ಯಾವುದೇ ಅನುದಾನದ ಅನುವುಗಳು ಇರಲಿಲ್ಲವಾದ್ದರಿಂದ ವಿಸಕಂಗಳು ಈ ಹೆಚ್ಚುವರಿ ವೆಚ್ಚಗಳನ್ನು ತಾವು ಪಡೆದಂತಹ ಸಾಲಗಳಿಂದ/ಸ್ವಂತ ಹಣಕಾಸಿನಿಂದ ಭರಿಸಿದ್ದವು. ಯೋಜನೆಯ ಅಡಿಯಲ್ಲಿ ಲಗತ್ತಿಸಲಾಗಿದ್ದಂತಹ ಷರತ್ತುಗಳನ್ನು ಪೂರೈಸಿರದಿದ್ದ ಕಾರಣ ದೀನದಿಯಾಳ ಉಪಾಧ್ಯಾಯ ಗ್ರಾಮೀಣ ವಿದ್ಯುತ್ ಯೋಜನೆ ಅಡಿಯಲ್ಲಿ ಅರ್ಹತೆ ಇದ್ದಂತಹ ₹ 262.12 ಕೋಟಿ ಮೊತ್ತದಷ್ಟು ಹೆಚ್ಚುವರಿ ಅನುದಾನವನ್ನು (ಮಂಜೂರಾತಿಗೊಂಡಿದ್ದ ವೆಚ್ಚಗಳ ಶೇಕಡಾ 15ರಷ್ಟು) ವಿಸಕಂಗಳು ಪಡೆದುಕೊಳ್ಳುವ ಸಂಭಾವ್ಯತೆಯು ಅನುಮಾನಾಸ್ಪದವಾಗಿದ್ದಿತು. ವಿಸಕಂಗಳು ಯೋಜನಾ ನಿರ್ವಹಣಾ ಸಲಹೆಗಾರರುಗಳನ್ನು ಟೆಂಡರುಗಳನ್ನು ಆಹ್ವಾನಿಸದೆಯೇ ಹೆಚ್ಚಿನ ವೆಚ್ಚದಲ್ಲಿ ನೇಮಕ ಮಾಡಿಕೊಂಡಿದ್ದವು, ಸಾಮಗ್ರಿಗಳನ್ನು ಅಧಿಕ ದರಗಳಲ್ಲಿ ಖರೀದಿಸಿದ್ದವು, ಇದು ₹ 66.09 ಕೋಟಿ ಮೊತ್ತದಷ್ಟು ಹೆಚ್ಚುವರಿ ವೆಚ್ಚದಲ್ಲಿ ಪರಿಣಮಿಸಿದ್ದಿತು.

**ಶಿಫಾರಸು**

- **ದೀನದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುತ್ ಯೋಜನೆ ಅಡಿಯಲ್ಲಿ ಹೆಚ್ಚುವರಿ ಅನುದಾನದ ಸ್ವೀಕೃತಿಗಾಗಿ ಷರತ್ತುಗಳನ್ನು ಪೂರೈಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಸರ್ಕಾರವು ಮೀಟರುಗಳನ್ನು ಅಳವಡಿಸುವ ಮೂಲಕದ ವಿದ್ಯುತ್ ಬಳಕೆಯ ಆಧಾರದ ಮೇರೆಗೆ ವರಮಾನ ಸಹಾಯಧನವನ್ನು ಬಿಡುಗಡೆಗೊಳಿಸುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.**